**ಘಟಕ 20**

# ದುಡಿಯುವ ತಾಯಂದಿರ ಮಕ್ಕಳಿಗಾಗಿ ಸಂಚಾರಿ ಶಿಶು ಕೇಂದ್ರಗಳು - ಒಂದು ದೃಷ್ಟಾಂತ

**ರಚನೆ**


**20.1 ಪೀಠಿಕೆ**
**20.2 ಕಾರ್ಯಕ್ರಮದ ಉದ್ದೇಶ**
**20.3 ವ್ಯಾಪ್ತಿ ಮತ್ತು ಹಾಜರಾತಿ**
**20.4 ಮಕ್ಕಳು ಸಂಚಾರಿ ಶಿಶು ಕೇಂದ್ರಗಳಲ್ಲಿ ಉಳಿಯುವ ಅವಧಿ**
**20.5 ಕ್ಷೇತ್ರ ಕಾರ್ಯಕ್ರಮ**
20.5.1 ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ
20.5.2 ಶಿಕ್ಷಣ ಮತ್ತು ಸಂಜ್ಞಾನಾತ್ಮಕ ಬೆಳವಣಿಗೆ
20.5.3 ಸಮುದಾಯಕ್ಕೆ ಬೆಂಬಲ ನೀಡುವಿಕೆ
**20.6 ಸಂಚಾರಿ ಶಿಶು ಕೇಂದ್ರಗಳು – ಕೆಲವು ಸಾಂಸ್ಥಿಕ ಅಂಶಗಳು**
20.6.1 ಸಮಗ್ರೀಕರಣದ ತತ್ವ
20.6.2 ಬಹುವಿಧ ಕೌಶಲ ಕಾರ್ಯಕರ್ತೆಯರು
20.6.3 ಸಿಬ್ಬಂದಿ ತರಬೇತಿ
**20.7 ಸಂಚಾರಿ ಶಿಶು ಕೇಂದ್ರಗಳ ವಿಶಿಷ್ಟ ಲಕ್ಷಣಗಳು**
20.7.1 ಬೆಂಬಲಿಸುವ ಕ್ರಮಗಳು
20.7.2 ಮೇಲ್ವಿಚಾರಣಾ ಕ್ರಮಗಳು
**20.8 ಶಿಶುಪಾಲನೆಗೆ ಹಣ**
**20.9 ಕಾರ್ಯಕ್ರಮದ ಪ್ರಭಾವ**
**20.10 ಉಪಸಂಹಾರ**
**20.11 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸಗಳಿಗೆ ಉತ್ತರಗಳು**


## 20.1 ಪೀಠಿಕೆ

ಮಹಾನಗರ ನವ ದೆಹಲಿಯು ಬಾಂಬೆಯಂತೆ ನಿರಂತರವಾಗಿ ವಿಸ್ತರಿಸುತ್ತ ಬೆಳೆಯುತ್ತಲೇ ಇದೆ. ಅಕ್ಕಪಕ್ಕದ ರಾಜ್ಯಗಳ ಗ್ರಮೀಣ ಪ್ರದೇಶಗಳಿಂದ ಕಾರ್ಮಿಕರು ನಿರಂತರವಾಗಿ ವಲಸೆ ಬರುತ್ತಲೇ ಇದ್ದಾರೆ. ಹೊಟ್ಟೆಪಾಡಿಗೊಂದು ಸ್ಥಿರವಾದ ಕೆಲಸ ಅವಕಾಶಗಳನ್ನು ಹುಡುಕುತ್ತಾ ಪುರುಷರು ಮಹಿಳೆಯರು ತಮ್ಮ ತಮ್ಮ ಎಳೆಯ ಮಕ್ಕಳನ್ನು, ಅಳಿದುಳಿದ

ಆಸ್ತಿಪಾಸ್ತಿಯ ಗಂಟನ್ನು ಹೆಗಲ ಮೇಲೆ ಹೊತ್ತುಕೊಂಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ, ಸಣ್ಣಪುಟ್ಟ ರಸ್ತೆಗಳಲ್ಲಿ ಭಾರದ ಹೆಜ್ಜೆಗಳಾಕುತ್ತಾ ದೆಹಲಿಯ ಕಡೆಗೆ ಸಾಗುತ್ತಾರೆ. ಇವರಲ್ಲಿ ಹಲವರು ಕಟ್ಟಡ ಕೂಲಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ವಿವಿಧ ಬಗೆಯ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಈ ಕಾರ್ಮಿಕರು ಅಸಂಘಟಿತರಾಗಿದ್ದು ಒಬ್ಬ ಮುಖಂಡನಾಗಿ ಸ್ವಯಂ ನೇಮಕಗೊಂಡ ಮಧ್ಯವರ್ತಿಯ ಕೆಳಗೆ ಗುಂಪುಗಳಲ್ಲಿ ಕೆಲಸ ಮಾಡುತ್ತಾರೆ. ಆತ ಕಟ್ಟಡ ಕಾಮಗಾರಿ ಕಂಟ್ರಾಕ್ಟರ್‌ರೊಂದಿಗೆ ಅವರ ಕೆಲಸದ ಷರತ್ತುಗಳನ್ನು ತೀರ್ಮಾನಿಸುತ್ತಾನೆ. ದೆಹಲಿ ಮತ್ತು ಬಾಂಬೆ ನಗರಗಳಲ್ಲಿ ಈ ಕುಟುಂಬಗಳು ಬಡವರಲ್ಲೇ ಅತ್ಯಂತ ಬಡವರಾಗಿದ್ದು ಆ ನಗರಗಳಲ್ಲಿ ಎಲ್ಲೇ ಇದ್ದರೂ ತಾತ್ಕಾಲಿಕ ನಿವಾಸಿಗಳಾಗಿ ಪರಿಗಣಿಸಲ್ಪಡುತ್ತಾರೆ; ಯಾವ ನಗರಾಡಳಿತವು ಇವರ ಪೌರ ಅಗತ್ಯತೆಗಳನ್ನು ಪರಿಗಣಿಸುವುದಿಲ್ಲ. ಇಂಥ ಗುಂಪುಗಳಲ್ಲಿ ದಿನವೂ ಮಕ್ಕಳು ಹುಟ್ಟುತ್ತಾರೆ, ಬೆಳೆಯುತ್ತಾರೆ.

ನಗರದ ಬಡತನದಲ್ಲಿ ಬೆಳೆಯುವ ಮಕ್ಕಳು ಎಲ್ಲಕ್ಕಿಂತ ದಾರುಣವಾದ ಸ್ಥಿತಿಯಲ್ಲಿ ಬದುಕುತ್ತಾರೆ. ಅನೇಕವೇಳೆ ನಗರದ ಬಡವರು ತಮ್ಮ ಮೂಲ ಹಳ್ಳಿಯೊಂದಿಗೆ ಸಂಪರ್ಕವನ್ನು ಕಳೆದುಕೊಂಡು ಮತ್ತು ಒಂದು ಕುಲ ಮತ್ತು ಒಂದು ಸಮುದಾಯಕ್ಕೆ ಸೇರಿರುವ ನೆಮ್ಮದಿಯ ಮತ್ತು ಭದ್ರತೆಯ ಭಾವನೆಯನ್ನು ಕಳೆದುಕೊಂಡು ಇತ್ತೀಚೆಗಷ್ಟೇ ನಗರಕ್ಕೆ ವಲಸೆ ಬಂದವರಾಗಿರುತ್ತಾರೆ.

ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿರುವ ಗ್ರಾಮೀಣ ವಲಸಿಗರಾದ ಈ ಪುರುಷರು ಮತ್ತು ಮಹಿಳೆಯರು ಬಹಳ ಒರಟಾದ, ಕಠಿಣವಾದ ಕೆಲಸಗಳಲ್ಲಿ ತೊಡಗಿರುತ್ತಾರೆ ಮತ್ತು ಅದರಲ್ಲೂ ಹೆಚ್ಚು ಕೌಶಲ್ಯ ನೀಡದ ಕೆಲಸಗಳನ್ನು ಮಹಿಳೆಯರಿಗೆ ಮೀಸಲಿಡುತ್ತಾರೆ. ಅಪಾಯಕಾರಿಯಾದ ವಾತಾವರಣದ ಹೊರತಾಗಿಯೂ ಮಕ್ಕಳೂ ಅಲ್ಲಿಯೇ, ಕಟ್ಟಡ ನಿರ್ಮಾಣ ಸ್ಥಳದ ಸುತ್ತಮುತ್ತಲಲ್ಲಿಯೇ ಇರುತ್ತಾರೆ. ಹರಿದ ಚಿಂದಿ ಬಟ್ಟೆಯಲ್ಲಿ ಸುತ್ತಿದ ಎಳೆಯ ಮಗುವೊಂದನ್ನು ಅಲ್ಲಿಯೇ ಒಂದು ಬುಟ್ಟಿಯಲ್ಲಿ ಮಲಗಿಸಿರುವುದು; ಗುರಿಯಿಲ್ಲದೆ, ಅಲಕ್ಷಿಸಲಾದ ಧೂಳು ತುಂಬಿದ ಚಿಕ್ಕಚಿಕ್ಕ ಮಕ್ಕಳು ಸಂಜೆ ಆಗುವುದನ್ನು ಮತ್ತು ತಮ್ಮ ತಾಯಂದಿರು ಹಿಂದಿರುಗುವುದನ್ನು

ಎದುರುನೋಡುತ್ತ ಕಾಯುತ್ತಿರುವುದು ನಗರಗಳ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾಗಿರುತ್ತದೆ.

ಅಂಥ ಸನ್ನಿವೇಶದಲ್ಲಿ ಈ ಸಂಚಾರಿ ಶಿಶು ಕೇಂದ್ರಗಳು ಜನ್ಮತಳೆದವು. ಈ ಘಟಕದಲ್ಲಿ, ಈ ಸಂಸ್ಥೆಯನ್ನು ಮತ್ತು ಅದರ ಕಾರ್ಯಚಟುವಟಿಕೆಗಳನ್ನು ಆಳವಾಗಿ ಅಧ್ಯಯನ ಮಾಡುತ್ತೇವೆ.

**ಉದ್ದೇಶಗಳು**

ಈ ಘಟಕವನ್ನು ಓದಿದ ನಂತರ ನೀವು ಈ ಕೆಳಗಿನವುಗಳನ್ನು ಮಾಡಲು ಸಮರ್ಥರಾಗಿರಬೇಕು

- ಸಂಚಾರಿ ಶಿಶು ಕೇಂದ್ರಗಳ ಅವಶ್ಯಕತೆಯನ್ನು ಚರ್ಚಿಸುವುದು
- ಸಂಚಾರಿ ಶಿಶು ಕೇಂದ್ರಗಳ ಕ್ಷೇತ್ರ ಕಾರ್ಯಾಕ್ರಮದ ವಿವಿಧ ಭಾಗಗಳ ರೂಪರೇಷೆಯನ್ನು ಗುರುತಿಸುವುದು
- ಸಂಚಾರಿ ಶಿಶು ಕೇಂದ್ರಗಳ ಕೆಲವು ಪ್ರಮುಖ ಸಾಂಸ್ಥಿಕ ಅಂಶಗಳನ್ನು ವಿಶ್ಲೇಷಿಸುವುದು
- ಸಂಚಾರಿ ಶಿಶು ಕೇಂದ್ರಗಳ ಕಾರ್ಯಕ್ರಮಗಳಲ್ಲಿನ ತರಬೇತಿ ಮತ್ತು ಮೇಲ್ವಿಚಾರಣಾ ಅಂಶಗಳ ಪ್ರಭಾವಪೂರ್ಣವಾದ ಕ್ರಿಯಾಶಕ್ತಿಯನ್ನು ಗುರುತಿಸುವುದು
- ಸಂಚಾರಿ ಶಿಶು ಕೇಂದ್ರಗಳ ವಿಶೇಷ ಲಕ್ಷಣಗಳನ್ನು ಪಟ್ಟಿಮಾಡುವುದು
- ಸಂಚಾರಿ ಶಿಶು ಕೇಂದ್ರಗಳ ಆರ್ಥಿಕ ಸಂಪನ್ಮೂಲದ ಮೂಲಗಳನ್ನು ಪಟ್ಟಿಮಾಡುವುದು
- ಸಂಚಾರಿ ಶಿಶು ಕೇಂದ್ರಗಳ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು

## 20.2 ಈ ಕಾರ್ಯಕ್ರಮದ ಉದ್ದೇಶ

ಈ ಸಂಚಾರಿ ಶಿಶು ಕೇಂದ್ರಗಳು ಒಂದು ಅಗತ್ಯವೆಂದು ಮೊದಮೊದಲಿಗೆ ಆಲೋಚಿಸಿದ ಮತ್ತು 1969ರಲ್ಲಿ ಸ್ಥಾಪಿಸಿದ ಮೊದಲ ವ್ಯಕ್ತಿ ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ಅನನುಭವಿಯಾದ ಸ್ವತಂತ್ರೋದ್ಯೋಗಿ ಲೇಖಕಿ ಮೀರಾ ಮಹಾದೇವನ್. ಆಗ ದೆಹಲಿಯ ರಾಜಘಾಟ್ ನಲ್ಲಿ ಗಾಂಧಿ ಶತಮಾನೋತ್ಸವ ಪ್ರದರ್ಶನದ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಮೀರಾ ಕೆಲಸದ ಸ್ಥಳದಲ್ಲಿ ಅಪಾಯಗಳಿಗೆ ಒಡ್ಡಿಕೊಂಡ, ಕಾವಲಿಲ್ಲದ ಶಿಶುಗಳ ಪರಿಸ್ಥಿತಿಯನ್ನು ನೋಡಿ ಅವರ ಸ್ಥಿತಿಯನ್ನು ಸುಧಾರಿಸಲು ನಿರ್ಧರಿಸಿದರು. ಹೀಗೆ "ದುಡಿಯುವ

*ತಾಯಂದಿರ ಮಕ್ಕಳಿಗಾಗಿ ಸಂಚಾರಿ ಶಿಶು ಕೇಂದ್ರಗಳು"* ಎಂದು ಕರೆಯಲ್ಪಟ್ಟ, ಅಥವಾ ಸಾಮಾನ್ಯವಾಗಿ *"ಸಂಚಾರಿ ಶಿಶು ಕೇಂದ್ರಗಳು"* ಎಂದು ಗುರಿತಿಸಲ್ಪಟ್ಟ ಸ್ವಯಂಸೇವಾ ಸಂಸ್ಥೆಯೊಂದು ಶುರುವಾಯಿತು.

ಎಲ್ಲಿ ನೋಡಿದರೂ ಮೀರಾಳಿಗೆ ಕಲ್ಲುಮಣ್ಣಿನ ಚೂರುಪಾರುಗಳ ಮೇಲೆ, ಮುಳ್ಳು ಮರಗಳ ನೆರಳಿನಲ್ಲಿ, ಕೆಸರಿನ ಮಧ್ಯವಿರುವ ನೀರಿನ ತೊಟ್ಟಿಯ ಹತ್ತಿರ ಹತ್ತಾರು ಮಕ್ಕಳು, ಎಳೆ ಕೂಸುಗಳು ಇರುವುದು ಕಾಣುತ್ತಿತ್ತು. ಮಕ್ಕಳು, ಅವರು ಕಂಟ್ರಾಕ್ಟರ್ ಗೆ, ಸಾರ್ವಜನಿಕರ ಕಣ್ಣಿಗೆ ಅಗೋಚರರಾಗಿದ್ದರು! ಆದರೆ ಮೀರಾ ಅವರನ್ನು ಮಕ್ಕಳಾಗಿ ಕಂಡಿದ್ದು ಒಂದು ಆಂದೋಲನವನ್ನೇ ಮಾಡಲು ಪ್ರೇರಿಪಿಸಿತು. 25 ವರ್ಷಗಳ ನಂತರ, ಇಂದು ಇದು ಕ್ಲಿಷ್ಟ ಪರಿಸ್ಥಿತಿಯಲ್ಲಿ ಇಟ್ಟ ದಿಟ್ಟ ಹೆಜ್ಜೆಯಾಗಿ ಈಗಲೂ ಪರಿಗಣಿಸಲ್ಪಡುತ್ತದೆ.

ಈ ಸಂಚಾರಿ ಶಿಶು ಕೇಂದ್ರಗಳ/ ದಿನ-ಆರೈಕೆ ಕೇಂದ್ರಗಳ "ಅಸ್ಥಿರತೆ" ಯನ್ನು ಕಟ್ಟಡ ನಿರ್ಮಾಣ ಉದ್ಯಮದ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಲು ಸಾಧ್ಯ. ವಿವಿಧ ಬಗೆಯ ಕಾರ್ಮಿಕ ಗುಂಪುಗಳು ಒಂದು ಕಟ್ಟಡ ನಿರ್ಮಾಣದಲ್ಲಿ ಕೆಲಸ ಮಾಡುತ್ತಾರೆ. ಕೆಲವರು ಕಟ್ಟಡದ ತಳಪಾಯಕ್ಕೆ ತೋಡುವ ಮತ್ತು ತಳಪಾಯ ಹಾಕುವ ಕೆಲಸ ಮಾಡಿದರೆ, ಕೆಲವರದು ಇಟ್ಟಿಗೆ ಗೋಡೆ ಕಟ್ಟುವ ಕೆಲಸ, ಕೆಲವರದು ಸಿಮೆಂಟ್ ಬೆರೆಸುವುದು ಮತ್ತೆ ಕೆಲವರದು ಕಟ್ಟಡ ಮುಗಿಸುವುದು, ಮರಗೆಲಸ ಮಾಡುವುದು ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ಹಾಗಾಗಿ ಗುಡಿಸಲುಗಳು ಕಚ್ಚಾವಾಗಿದ್ದು, ಕೌಶಲ್ಯವಿಲ್ಲದ ಕೆಲಸಗಾರರಿಗೆ ದೀರ್ಘಕಾಲಿಕ ಕೆಲಸ ಸಿಗುವ ಸಾಧ್ಯತೆಗಳೇ ಇರದೆ, ಕಾರ್ಮಿಕರ ಬಿಡಾರಗಳು ತಾತ್ಕಾಲಿಕವಂತದಾಗಿದ್ದವು. ಹೀಗೆ, ಒಂದು ಕಟ್ಟಡದ ತಳಪಾಯದ ಕೆಲಸ ಮುಗಿದ ಕೂಡಲೇ ಈ ಮೊದಲಿದ್ದ ಕುಟುಂಬಗಳು ಅಲ್ಲಿಂದ ಹೊರಟರೆ, ಮತ್ತೊಂದು ಹಂತದ ಕೆಲಸ ಮಾಡುವ ತಂಡದವರು ಬಂದು ನೆಲೆಯೂರುತ್ತಿದ್ದರು. ಇಡೀ ಕಟ್ಟಡ ನಿರ್ಮಾಣವಾದಾಗ, ಅಥವಾ ಒಂದೆರಡು ತಿಂಗಳು ಮೊದಲೇ ಎಳೆ ಶಿಶುಗಳು ಶಿಶು ಕೇಂದ್ರಗಳಿಗೆ ಬರುವುದನ್ನು ನಿಲ್ಲಿಸುವರು ಮತ್ತು ಆದ್ದರಿಂದ ಸಂಚಾರಿ ಶಿಶು ಕೇಂದ್ರಗಳು ಆ ಕೇಂದ್ರವನ್ನು ಮುಚ್ಚಿ ಆಗಷ್ಟೇ ಕಟ್ಟಡ ನಿರ್ಮಾಣ ಪ್ರಾರಂಭವಾಗುತ್ತಿದ್ದ ಮತ್ತೊಂದು ಜಾಗದಲ್ಲಿ ಶುರುಮಾಡುತ್ತಿದ್ದರು.

ಈ ಶಿಶು ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಅನೇಕ ತೊಂದರೆಗಳಿದ್ದವು: ಸಾಮಾನ್ಯವಾಗಿ ಮಕ್ಕಳನ್ನು ಇರಿಸಲು ಯಾವುದೇ ಜಾಗವಿರಲಿಲ್ಲ, ನೀರು ಸಿಗುತ್ತಿರಲಿಲ್ಲ ಮತ್ತು ಸೂಕ್ತ ಸಿಬ್ಬಂದಿಯ ಕೊರತೆಯಿತ್ತು. ಕೆಲವೊಮ್ಮೆ ಒಂದು ಡೇರೆ, ಒಂದು ಗುಡಿಸಲು, ಕಟ್ಟಡವೊಂದರ ನೆಲಮಾಳಿಗೆ ಅಥವಾ ಯಾವುದೋ ಕೊಠಡಿಯೊಂದರ ಭಾಗದಲ್ಲಿ ಯಾವುದೇ ಪೂರ್ವಸಿದ್ಧತೆಯಿಲ್ಲದೆ ಅನುಗೊಳಿಸಿದ ಆಶ್ರಯಗಳನ್ನು ಬಳಸಲಾಗುತ್ತಿದ್ದವು. ಇಲ್ಲಿ ಅಸ್ಥಿರತೆ ಪ್ರಮುಖ ಸೂಚಿಕೆ ಪದವಾಗಿತ್ತು. ಯಾವುದೇ ಸಮಯದಲ್ಲಿ ಒಂದೇ ಕಟ್ಟಡದ ಬೇರೆಬೇರೆ ಕಡೆಗೆ ಅಥವಾ ಸಂಪೂರ್ಣವಾಗಿ ಬೇರೊಂದು ಕಟ್ಟಡ ನಿರ್ಮಾಣ ಸ್ಥಳಕ್ಕೆ ಕೇಂದ್ರದ ಸಿಬ್ಬಂದಿಗಳು ಮತ್ತು ಮಕ್ಕಳು ಸ್ಥಳಾಂತರವಾಗಲು ತಯಾರರಾಗಿರಬೇಕಿತ್ತು. ಹಾಗಾಗಿ, ಕುಟುಂಬಗಳು ವಲಸೆಹೋಗುವುದನ್ನು ಮತ್ತು ಕೇಂದ್ರಗಳ ನಶ್ವರತೆಯನ್ನು ಸಂಕೇತಿಸುವ ಕಾರಣ "ಸಂಚಾರಿ ಶಿಶು ಕೇಂದ್ರಗಳು" ಎಂಬ ಹೆಸರು ಗಳಿಸಿತ್ತು. *"ಆದ್ದರಿಂದ, ಅಸ್ಥಿರತೆ ಎನ್ನುವುದು ದಿನದಿಂದ ದಿನಕ್ಕೆ ಆಗುವ ಸ್ಥಳಾಂತರ ಎಂದು ಸೂಚಿಸುವುದಾಗದೆ ವಲಸಿಗರ* ಅಗತ್ಯ*ಗಳನ್ನು* ಪ್ರತಿ*ಬಿಂಬಿಸುವುದಾಗಿದೆ".*

ಈ ಸಂಚಾರಿ ಶಿಶು ಕೇಂದ್ರಗಳಿಗೆ ಅನೇಕ ಮೂಲಗಳಿಂದ ಸಹಾಯ ಬಂದವು. ಸ್ನೇಹಿತರು, ಹಿತೈಷಿಗಳು ತಮ್ಮ ಸಹಾಯಹಸ್ತ ಚಾಚಿದರು, ಸಂಸ್ಥೆಯನ್ನು ಕಟ್ಟಲು ಪರಿಣಿತರೊಂದಿಗೆ ಸಮಾಲೋಚನೆ ಮಾಡಲಾಯಿತು ಮತ್ತು ಹಣಕಾಸು ನೆರವು ನೀಡುವ ಮೂಲಗಳನ್ನು ಶೋಧಿಸಲಾಯಿತು. ಅನೇಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ದತ್ತಿ ಸಂಸ್ಥೆಗಳು ಹಣಕಾಸಿನ ನೆರವು ಒದಗಿಸಿದವು. ವಲಸೆ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಒಂದು ಆಂದೋಲನ ಶುರುವಾಯಿತು. ಆರಂಭದಲ್ಲಿ ಇದು ಕೇವಲ ದಾಕ್ಷಿಣ್ಯಪರತೆಯ ಮತ್ತು ಸಾಮಾನ್ಯ ತಿಳುವಳಿಕೆಯ ಸಾಧಾರಣ ಕ್ರಿಯೆಗಳಾಗಿ ಕಂಡುಬಂದವು. ಇದೊಂದು ಪರಿವರ್ತಕ ಶಕ್ತಿಯುಳ್ಳ, ಸುಸ್ಥಿರತೆ ಹೊಂದಿದ ಸರಿಯಾದ ಕ್ರಿಯೆಗೆ ಉತ್ತಮ ಉದಾಹರಣೆಯಾಗಿದೆ.

ಮೊದಲ ಆದ್ಯತೆಯು ಎಳೆಯ ಶಿಶುಗಳಿಗೆ ನೀಡಿದ್ದು, ಅದು ಈ ಕೇಂದ್ರಗಳಿಗೆ *"ಶಿಶು ಕೇಂದ್ರಗಳು"* ಎಂಬ ಪದವನ್ನು ಏಕೆ ಬಳಸಲಾಯಿತು ಎನ್ನುವುದನ್ನು ವಿವಿರಿಸುತ್ತದೆ. ತಾಯಂದಿರನ್ನು ತಮ್ಮ ಎಳೆಯ ಶಿಶುಗಳ ಆರೈಕೆ ಮಾಡುವ ಜವಾಬ್ದಾರಿಯನ್ನು ಇತತರಿಗೆ ಬಿಡುವಂತೆ ಮನವೊಲಿಸುವುದು; ಸ್ವಚ್ಛತೆ,

ಆಹಾರ ಒದಗಿಸುವುದು ಮತ್ತು ಪ್ರತಿರಕ್ಷಣ ಲಸಿಕೆ ನೀಡುವ ನಿತ್ಯಕ್ರಮಗಳ ಯೋಜನೆ; ಶಿಶುಗಳ ಆರೋಗ್ಯವನ್ನು ಪರೀಕ್ಷಿಸಲು ವೈದ್ಯರನ್ನು ಕರೆತರುವುದು - ಇಂಥವು ಆರಂಭದ ಕಾರ್ಯಗಳಾಗಿದ್ದವು. ಶಿಶುಗಳನ್ನು ಮಲಗಿಸಲು ಸಾಂಪ್ರದಾಯಿಕ ಮತ್ತು ಪರಿಚಿತ ರೀತಿಯದ ಜೋಲಿಗಳಂತೆಯೇ ತೊಟ್ಟಿಲುಗಳನ್ನು ಮಾಡಲಾಯಿತು. ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಮತ್ತು ಸರಳವಾಗಿ ಇಡಲಾಯಿತು. ಕ್ರಮೇಣವಾಗಿ ತಾಯಂದಿರು ಕೇಂದ್ರಗಳ ಬಗ್ಗೆ ವಿಶ್ವಾಸ ಬೆಳೆಸಿಕೊಂಡರು. ದಿನಕ್ಕೆ ಎರಡು ಮೂರು ಸಲ ತಮ್ಮ ಶಿಶುಗಳಿಗೆ ಹಾಲುಣಿಸಲು ಬಂದಾಗ ಅಲ್ಲಿಯ ಸಿಬ್ಬಂದಿಗಳ ಜೊತೆ ಲೋಕಾಭಿರಾಮವಾಗಿ ಮಾತನಾಡುತ್ತಾ ಮಕ್ಕಳನ್ನು ಆರೈಕೆ ಮಾಡುವ ಸೂಕ್ತ ರೀತಿಗಳನ್ನು ತಿಳಿದುಕೊಂಡರು.

ಎಳೆಯ ಮಕ್ಕಳನ್ನು ತಾಯಂದಿರಿಂದ ಬೇರ್ಪಡಿಸಿ ಕೇಂದ್ರಗಳಿಗೆ ಕರೆತಂದಾಗ ಆ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ಹಿರಿಯ ಮಕ್ಕಳು ಕೇಂದ್ರದ ಸುತ್ತ ಸುಳಿದಾಡುತ್ತಿದ್ದರು. ಪೋಷಕರು ಸದಾ ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರವಾಗುತ್ತಿದ್ದುದರಿಂದ ಆ ಮಕ್ಕಳು ಯಾವುದೇ ಒಂದು ನಿರ್ದಿಷ್ಟ ಶಾಲೆಗೆ ಹೋಗುವ ಅವಕಾಶಗಳಿರಲಿಲ್ಲ. ಅಂಬೆಗಾಲಿಡುತ್ತ ನಡೆಯಲು ಕಲಿತ ಮತ್ತು ಶಾಲಾಪೂರ್ವ ವಯಸ್ಸಿನ ಮಕ್ಕಳನ್ನು ಮೊದಲಿಗೆ ಕೇಂದ್ರಕ್ಕೆ ಸೇರಿಸಿಕೊಳ್ಳಲಾಯಿತು, ಆನಂತರ 12 ವಯಸ್ಸಿನವರೆಗಿನ ಹಿರಿಯ ಮಕ್ಕಳನ್ನೂ ಸೇರಿಸಿಕೊಳ್ಳಲಾಯಿತು.

ಇದಲ್ಲದೆ, ಆರಂಭದಲ್ಲಿ ಸಂಚಾರಿ ಶಿಶು ಕೇಂದ್ರಗಳು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿರುವ ವಲಸೆ ಬಂದ ಕೂಲಿಕಾರ್ಮಿಕರ ಮಕ್ಕಳಿಗೆಂದು ಶುರುವಾಗಿದ್ದರೂ, ಆನಂತರ, 1976ರಿಂದ ಕೊಳಗೇರಿ ಪ್ರದೇಶಗಳ ಹಾಗೂ ಪುನರ್ವಸತಿ ಕಾಲೋನಿಗಳ ಮಕ್ಕಳಿಗೂ ತಮ್ಮ ಸೇವೆಗಳನ್ನು ವಿಸ್ತರಿಸಿದವು.

1970ರಲ್ಲಿ, ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಸಂಚಾರಿ ಶಿಶು ಕೇಂದ್ರಗಳು ಮೂರು ಕೇಂದ್ರಗಳನ್ನು ಹೊಂದಿದ್ದವು. ಕ್ರಮೇಣವಾಗಿ ಅವುಗಳ ಸಂಖ್ಯೆ ಹೆಚ್ಚಾಗಿ 1993-94 ಷ್ಟರ ಹೊತ್ತಿಗೆ ಯಾವುದೇ ದತ್ತ ಸಮಯದಲ್ಲಿ 20-25 ಕೇಂದ್ರಗಳು ಬಾಂಬೆ ಮತ್ತು ದೆಹಲಿಯಲ್ಲಿದ್ದವು. ಇವುಗಳಲ್ಲಿ ಬಹುತೇಕ ಕೇಂದ್ರಗಳು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿದ್ದವು ಮತ್ತು ಎರಡೂ ನಗರಗಳಲ್ಲಿ ನಗರದ ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿದ್ದವು. ಸಣ್ಣದಾಗಿ ಶುರುವಾದ ಸಂಚಾರಿ ಶಿಶು ಕೇಂದ್ರಗಳು ಇಂದು ಯಾವುದೇ ಒಂದು ದತ್ತ

ಸಮಯದಲ್ಲಿ ಸುಮಾರು 4000-5000 ಮಕ್ಕಳಿಗೆ ಸೇವೆ ಸಲ್ಲಿಸುತ್ತಿರುವ ಸಂಸ್ಥೆಯಾಗಿ ಬೆಳದಿದೆ. ಮಕ್ಕಳ ಸಂಖ್ಯೆಯ ಬೆಳವಣಿಗೆಯೊಂದಿಗೆ ಕ್ಷೇತ್ರ ಸಿಬ್ಬಂದಿಯ ಸಂಖ್ಯೆಯು ಬೆಳೆದಿದೆ.

ಇಂದು ಈ ಶಿಶು ಕೇಂದ್ರಗಳ ಸೇವೆಯು ವಿಸ್ತಾರವಾಗಿ ಹಬ್ಬಿದೆ. ಶಿಶು ಕೇಂದ್ರ, ಬಾಲವಾಡಿ ಮತ್ತು ಅನೌಪಚಾರಿಕ ಶಿಕ್ಷಣಕ್ಕೆಂದು ನಾವೀನ್ಯತೆಯುಳ್ಳ ತರಬೇತಿ ಘಟಕಗಳನ್ನು ಒಳಗೊಂಡಿರುವ ಸಂಚಾರಿ ಶಿಶು ಕೇಂದ್ರಗಳು ಹೊರತಂದಿರುವ ಇತ್ತೀಚಿನ ಪುಸ್ತಕಗಳು ಆತ್ಮವಿಶ್ವಾಸದಿಂದ ಸಿಬ್ಬಂದಿಗಳ ಅನುಭವಗಳನ್ನು ದಾಖಲಿಸಿ ಹಂಚಿಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ.

**ಸಂಚಾರಿ ಶಿಶು ಕೇಂದ್ರಗಳು - ಕೆಲವು ಪ್ರಮುಖ ಮಾಹಿತಿ**

| | |
|---|---|
| **ಉದ್ದೇಶಗಳು** | • ಕಟ್ಟಡ ನಿರ್ಮಾಣ ಸ್ಥಳ, ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿ ದುಡಿಯುತ್ತಿರುವ ತಾಯಂದಿರ ಮಕ್ಕಳಿಗಾಗಿ, ಆರೋಗ್ಯ, ಪೌಷ್ಟಿಕಾಂಶ ಶಿಕ್ಷಣ ಮತ್ತು ಮನರಂಜನಾ ಚಟುವಟಿಕೆಗಳ ಸುತ್ತ ಸಂಯೋಜಿತಗೊಂಡ ಸಮಗ್ರವಾದ ದಿನ ಆರೈಕೆ ಒದಗಿಸುವುದು.<br>• ಸ್ವಯಂಸೇವೆ ಒದಗಿಸುವ ಕ್ಷೇತ್ರದಲ್ಲಿ, ತನ್ನದೇ ಆದ ಸಂಸ್ಥೆಯ ಮತ್ತು ಇತರ ಸ್ವಯಂ ಸೇವಾಸಂಸ್ಥೆಗಳ ಸಿಬ್ಬಂದಿಗಳ ತರಬೇತಿಯ ಮೂಲಕ ವೃತ್ತಿನಿರತ ಕಾರ್ಯಪಡೆಯೊಂದನ್ನು ಸೃಷ್ಟಿಸುವುದು. |
| **ಉದ್ದಿಷ್ಟ ಗುಂಪು** | • ಕಟ್ಟಡ ನಿರ್ಮಾಣದಲ್ಲಿ ಕೆಲಸ ಮಾಡುವ ವಲಸೆ ಕಾರ್ಮಿಕರ ಮಕ್ಕಳು, ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿ ವಾಸಿಸುತ್ತಿರುವ ದುಡಿಯುವ ತಾಯಂದಿರ ಮಕ್ಕಳು. |
| **ಕೆಲಸದ ವೇಳೆ** | • ಮುಂಜಾನೆ 8-30ರಿಂದ ಸಂಜೆ 4-30 ರವರೆಗೆ, ವಾರದ 6 ದಿನಗಳು, ವರ್ಷದ 12 ತಿಂಗಳುಗಳು |
| **ಮಕ್ಕಳ ವಿಭಾಗೀಕರಣ** | • ಶಿಶುಕೇಂದ್ರ ವಿಭಾಗ (0-2 + ವರ್ಷ)<br>• ಬಾಲವಾಡಿ ವಿಭಾಗ (3-5 + ವರ್ಷ)<br>• ಅನೌಪಚಾರಿಕ ಶಿಕ್ಷಣ (6-12 ವರ್ಷ) |

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 1

1. ಈ ಕೆಳಗಿನ ಹೇಳಿಕೆಗಳಿಗೆ ಆದಷ್ಟು ಸರಿಯಾದ ಉತ್ತರಕ್ಕೆ (ಸರಿ)ಗುರುತು ಹಾಕಿ

i. ಸಂಚಾರಿ ಶಿಶು ಕೇಂದ್ರಗಳು 1969ರಲ್ಲಿ ಮೊದಲ ಬಾರಿಗೆ ಇವರಿಂದ ಸ್ಥಾಪಿಸಲ್ಪಟ್ಟವು

a. ಇಂದಿರಾ ಗಾಂಧಿ
b. ತಾರಾಬಾಯಿ ಮೋದಕ್
c. ಮೀರಾ ಮಹಾದೇವನ್
d. ಮೀರಾ ನಾಯರ್

ii. ಸಂಚಾರಿ ಶಿಶು ಕೇಂದ್ರಗಳು ಈ ಕೆಳಗಿನವರ ಅಗತ್ಯಗಳನ್ನು ಪೂರೈಸಲೆಂದು ಪ್ರಾರಂಭವಾದವು
a. ಗಣಿ ಕಾರ್ಮಿಕರ ಮಕ್ಕಳಿಗಾಗಿ
b. ಕಾರ್ಖಾನೆಗಳ ಮಕ್ಕಳಿಗಾಗಿ
c. ಕಟ್ಟಡ ನಿರ್ಮಾಣ ಸ್ಥಳಗಳಲ್ಲಿರುವ ಮಕ್ಕಳಿಗಾಗಿ
d. ಕೊಳೆಗೇರಿಯ ಮಕ್ಕಳಿಗಾಗಿ

iii. ಸಂಚಾರಿ ಶಿಶು ಕೇಂದ್ರಗಳು ಇವರಿಗಾಗಿ ನಾವೀನ್ಯತೆಯುಳ್ಳ ತರಬೇತಿ ಘಟಕಗಳನ್ನು ತಯಾರಿಸಿದೆ
a. ಶಿಶು ಕೇಂದ್ರ ಕಾರ್ಯ ಕರ್ತರಿಗೆ
b. ಬಾಲವಾಡಿ ಕಾರ್ಯ ಕರ್ತರಿಗೆ
c. ಅನೌಪಚಾರಿಕ ಶಿಕ್ಷಣ ನೀಡುವ ಕಾರ್ಯ ಕರ್ತರಿಗೆ
d. ಮೇಲಿನ ಎಲ್ಲವೂ

2. "ಸಂಚಾರಿ ಶಿಶು ಕೇಂದ್ರಗಳು" ಎಂಬ ಪದವು ಶಿಶುಪಾಲನಾ ಕೇಂದ್ರಗಳ ಅಸ್ಥಿರತೆಗೆ ಅನ್ವಯಿಸುತ್ತದೆ. ಈ ಅಸ್ಥಿರತೆ ಎಂಬುದನ್ನು ನೀವು ಹೇಗೆ ವಿವರಿಸುತ್ತೀರಿ?

______________________________________________

______________________________________________

______________________________________________

______________________________________________

## 20.3 ವ್ಯಾಪ್ತಿ ಮತ್ತು ಹಾಜರಾತಿ

ದಿನ-ಶಿಶುಪಾಲನಾ ಕೇಂದ್ರಗಳು (day care centres) ದೊಡ್ಡ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ, ಕೊಳೆಗೇರಿಗಳಲ್ಲಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿ ಇವೆ. ಯಾವುದೇ ನಿರ್ಮಾಣ ಸ್ಥಳದ ಕೇಂದ್ರವು ತಾತ್ಕಾಲಿಕವಾಗಿದ್ದು, ಕಟ್ಟಡ ನಿರ್ಮಾಣವಾದ ಕೂಡಲೇ ಅಲ್ಲಿ ಮುಚ್ಚಲಾಗುತ್ತದೆ ಮತ್ತು ಮತ್ತೊಂದು ಕೆಲಸದ ಸ್ಥಳದಲ್ಲಿ ಹೊಸದೊಂದು ಕೇಂದ್ರವು ಪ್ರಾರಂಭವಾಗುತ್ತದೆ. ಕೊಳೆಗೇರಿಗಳ ಮತ್ತು ಪುನರ್ವಸತಿ ಕಾಲೋನಿಗಳ ಶಿಶುಪಾಲನಾ ಕೇಂದ್ರಗಳು ಹೆಚ್ಚು ಶಾಶ್ವತವಾಗಿರುವಂತವು.

ಸಂಚಾರಿ ಶಿಶು ಕೇಂದ್ರಗಳು ಅವು ಶುರುವಾದಂದಿನಿಂದ ಇಂದಿನವರೆಗೆ, ಅಂದರೆ 1969 ರಿಂದ 1994ರವೆರೆಗೆ, ಒಟ್ಟಾರೆಯಾಗಿ ಬಾಂಬೆ, ದೆಹಲಿ ಮತ್ತು ಪೂನಾ ಸೇರಿದಂತೆ 362 ದಿನ- ಶಿಶುಪಾಲನಾ ಕೇಂದ್ರಗಳನ್ನು ನಡೆಸುತ್ತಿವೆ (ಕೋಷ್ಟಕ 20.1)

**ಕೋಷ್ಟಕ 20.1: 1969ರಿಂದ 1994 ರವರೆಗೆ ನಡೆಯುತ್ತಿದ್ದ ಒಟ್ಟಾರೆ ಕೇಂದ್ರಗಳ ಸಂಖ್ಯೆ**

| | ದೆಹಲಿ | ಬಾಂಬೆ | ಪೂನಾ | ಭಾರತದಲ್ಲಿ |
|---|---|---|---|---|
| ಶುರುವಾದ ವರ್ಷ | 1969 | 1972 | 1980 | |
| ಒಟ್ಟು ಕೇಂದ್ರಗಳು | 194 | 143 | 25 | 362 |

**ಮೂಲ: ಸಂಚಾರಿ ಶಿಶು ಕೇಂದ್ರಗಳ ವಾರ್ಷಿಕ ವರದಿ 1993-94**

ನಾವೀಗ ಒಂದು ವರ್ಷದಲ್ಲಿ ನಡೆಯುವ ಕೇಂದ್ರಗಳ ಸಂಖ್ಯೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. 1993-94ರಲ್ಲಿ ಒಟ್ಟು 60 ಕೇಂದ್ರಗಳಿದ್ದವು. ಹಿಂದಿನ ವರ್ಷಗಳಲ್ಲಿದ್ದಂತೆಯೇ, ಬಹುಸಂಖ್ಯೆಯ ಕೇಂದ್ರಗಳು ಕಟ್ಟಡ ನಿರ್ಮಾಣ ಸ್ಥಳಗಲ್ಲಿ ನಡೆಯುತ್ತಿದ್ದವು, ಕೆಲವು ಪುನರ್ವಸತಿ ಕಾಲೋನಿಗಳಲ್ಲಿದ್ದವು, ಕೆಲವು ಕೊಳೆಗೇರಿಗಳಲ್ಲಿದ್ದವು. ವರ್ಷದಲ್ಲಿ ನಡೆಸಿದ ಮೊತ್ತ 60 ಕೇಂದ್ರಗಳಲ್ಲಿ, 47 ಕೇಂದ್ರಗಳು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿದ್ದವು, 6 ಕೊಳೆಗೇರಿಯಲ್ಲಿ (ಬಾಂಬೆ ಮತ್ತು ದೆಹಲಿ ಎರಡರಲ್ಲೂ 3-3) ಮತ್ತು 7 ದೆಹಲಿಯ ಪುನರ್ವಸತಿ ಕಾಲೋನಿಗಳಲ್ಲಿದ್ದವು.

1994 ರಲ್ಲಿ ಸಂಚಾರಿ ಶಿಶು ಕೇಂದ್ರಗಳು ಒಟ್ಟು 13,783 ಮಕ್ಕಳನ್ನು ತಮ್ಮ ವ್ಯಾಪ್ತಿಯಲ್ಲಿ ಒಳಗೊಂಡಿದ್ದವು. ಇವರಲ್ಲಿ 11,340 ಅಂದರೆ ಶೇಕಡ 82% ಮಕ್ಕಳು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿದ್ದರು; 2443 ಅಂದರೆ ಶೇಕಡ 18% ಮಕ್ಕಳು ಪುನರ್ವಸತಿ ಕಾಲೋನಿಗಳು ಮತ್ತು ಕೊಳೆಗೇರಿಗಳಲ್ಲಿದ್ದರು.

ಗಂಡು ಹೆಣ್ಣು ಮಕ್ಕಳ ಅನುಪಾತವು ಹಿಂದಿನ ಕೆಲವು ವರ್ಷಗಳಲ್ಲಿ ಇದ್ದಂತೆಯೇ, ಸಮವಾಗಿತ್ತು. ಸಂಚಾರಿ ಶಿಶು ಕೇಂದ್ರಗಳ ಆರಂಭದ ಕೆಲವು ವರ್ಷಗಳಲ್ಲಿ ಕಡಮೆ ಹೆಣ್ಣು ಮಕ್ಕಳಿದ್ದು ಲಿಂಗಾನುಪಾತವು ಅಸಮವಾಗಿತ್ತು. ಆ ಅಸಮತೋಲನವನ್ನು ಬಹಳ ಹಿಂದೆಯೇ ಸರಿಮಾಡಲಾಗಿದೆ.

## 20.4 ಮಕ್ಕಳು ಶಿಶು ಕೇಂದ್ರಗಳಲ್ಲಿ ಉಳಿಯುವ ಅವಧಿ

ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಕೆಲಸ ಮಾಡುವ ಕುಟುಂಬಗಳು, ಈಗಾಗಲೇ ಚರ್ಚಿಸಿದಂತೆ ನಿರಂತರವಾಗಿ ಸ್ಥಳ ಬದಲಾವಣೆ ಮಾಡುತ್ತಲೇ ಇರುತ್ತಾರೆ. ಇದು ಮಕ್ಕಳು ಕೇಂದ್ರಗಳಲ್ಲಿ ಉಳಿಯುವ ಮತ್ತು ಅದರ ಚಟುವಟಿಕೆಗಳಿಗೆ ಒಡ್ಡಿಕೊಳ್ಳುವ ಅವಧಿಯ ಮೇಲೆ ಪರಿಣಾಮ ಬೀರಿ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಶಿಕ್ಷಣ ನೀಡಲು ಪ್ರಯತ್ನಿಸುತ್ತಿರುವವರಿಗೆ ಪ್ರಮುಖ ಸವಾಲಾಗಿ ಪರಿಣಮಿಸುತ್ತದೆ.

ಕಳೆದ ಎರಡು ದಶಕಗಳಲ್ಲಿ, ಒಂದು ಸಲ ಸಂಚಾರಿ ಶಿಶು ಕೇಂದ್ರಗಳಿಗೆ ಮಕ್ಕಳು ಪ್ರವೇಶ ಪಡೆದ ನಂತರ ಅವರನ್ನು ಬೆಂಬಿಡಿದು ಹಿಂಬಾಲಿಸುವ ಪ್ರಯತ್ನಗಳು ಹಲವಾರು ನಡೆದಿವೆ. ಅನೇಕವೇಳೆ ಅವರು ಇನ್ನೊಂದು ಕೇಂದ್ರದಲ್ಲಿ ಕಂಡುಬರುತ್ತಾರೆ, ಆದರೆ ಕೇಂದ್ರಗಳಲ್ಲಿನ ವಲಸೆ ಮಕ್ಕಳ ಮೇಲೆ ಮಾಡಿರುವ ಎರಡು ಪ್ರಮುಖ ಸಂಶೋಧನಾ ಅಧ್ಯಯನಗಳು ತೋರಿಸಿರುವಂತೆ ಶೇಕಡ 65% ರಿಂದ ಶೇಕಡ 75% ಮಕ್ಕಳು ಒಂದೇ ಕೇಂದ್ರದಲ್ಲಿ ಸತತವಾಗಿ ಉಳಿಯುವ ಅವಧಿ ಮೂರು ತಿಂಗಳಿಗೂ ಕಡಮೆಯಾಗಿದೆ. ಈ ಅಂಕಿಅಂಶಗಳು ವರ್ಷದಿಂದ ವರ್ಷಕ್ಕೆ ಮತ್ತು ನಗರದಿಂದ ನಗರಕ್ಕೆ ವ್ಯತ್ಯಾಸವಾಗುತ್ತವೆ. ಆದರೆ ಹೆಚ್ಚುಕಡಮೆ, ಮಕ್ಕಳು ಈ ಸಂಚಾರಿ ಶಿಶು ಕೇಂದ್ರಗಳಲ್ಲಿ ಉಳಿಯುವ ಅವಧಿ ಬಹುತೇಕ ಸಂದರ್ಭಗಳಲ್ಲಿ ಮೂರು ತಿಂಗಳಿಗೂ ಕಡಮೆಯಾಗಿದೆ.

## 20.5 ಕ್ಷೇತ್ರ ಕಾರ್ಯಕ್ರಮ

ಸಂಚಾರಿ ಶಿಶು ಕೇಂದ್ರಗಳ ಕ್ಷೇತ್ರ ಕಾರ್ಯಕ್ರಮವನ್ನು ಸ್ಥೂಲವಾಗಿ ಮೂರು ಅಂಶಗಳಾಗಿ ವಿಂಗಡಿಸಬಹುದು:

- ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ
- ಶಿಕ್ಷಣ ಮತ್ತು ಸಂಜ್ಞಾನಾತ್ಮಕ ಬೆಳವಣಿಗೆ
- ಸಮುದಾಯಕ್ಕೆ ಬೆಂಬಲ ನೀಡುವಿಕೆ

ಸಂಚಾರಿ ಶಿಶು ಕೇಂದ್ರಗಳ ಕಾರ್ಯಕ್ರಮದ ಇತರ ಅಂಶಗಳೆಂದರೆ, "*ಇತರ ಗುಂಪುಗಳಿಗೆ ತರಬೇತಿ ನೀಡುವುದು; ದಾಖಲಿಸುವುದು ಮತ್ತು ಸಂಶೋಧನೆ ಮಾಡುವುದು; ಮತ್ತು ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಇತರ ಸ್ವಯಂಸಂಸ್ಥೆಗಳೊಂದಿಗೆ ಜಾಲಬಂಧಗಳನ್ನು ಕಟ್ಟುವುದು*".

### 20.5.1 ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ

ಸಂಚಾರಿ ಶಿಶು ಕೇಂದ್ರಗಳು ಸುಲಭದಲ್ಲಿ ರೋಗಕ್ಕೆ ತುತ್ತಾಗುವ ವಯಸ್ಸಿನ ಮಕ್ಕಳಿಗೆ ಅಂದರೆ, 0-12 ವರ್ಷ ವಯಸ್ಸಿನವರಿಗೆ ಆರೋಗ್ಯ ಆರೈಕೆ ಸೇವೆಗಳನ್ನು ಒದಗಿಸುತ್ತವೆ. ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿವೆ:

0-2+ ವರ್ಷ: ಈ ಶಿಶು ಕೇಂದ್ರ ವಿಭಾಗವು ಕೆಲವೊಮ್ಮೆ ಅತ್ಯಂತ ಚಿಕ್ಕ ವಯಸ್ಸಿನ ಅಂದರೆ ಒಂದು ತಿಂಗಳ ಮಗುವನ್ನೂ ಒಳಗೊಳ್ಳುತ್ತದೆ

3-5+ ವರ್ಷ: ಶಾಲಾಪೂರ್ವ ಮಕ್ಕಳಿಗಾಗಿ ಬಾಲವಾಡಿ ವಿಭಾಗ

6-12 ವರ್ಷ: ಯಾವ ಮಕ್ಕಳು ಶಾಲೆಗೆ ಹೋಗುತ್ತಿಲ್ಲವೋ ಅವರಿಗೆ ಅಥವಾ ಔಪಚಾರಿಕ ಶಾಲಾಶಿಕ್ಷಣ ವ್ಯವಸ್ಥೆಯನ್ನು ಸೇರಲು ಸಜ್ಜಾಗುತ್ತಿರುವ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ (non-formal education (NFE)) ವಿಭಾಗ.

#### ಆರೋಗ್ಯ ಸೇವೆಗಳು

ನಿಯಮಿತವಾಗಿ ವೈದ್ಯರು ಈ ಕೇಂದ್ರಗಳಿಗೆ ಭೇಟಿ ಕೊಟ್ಟು ಮಕ್ಕಳು ಮತ್ತು ಪೋಷಕರಿಗೆ ಪರಿಹಾರಿಕ ಮತ್ತು ನಿರೋಧಕ ಆರೋಗ್ಯ ಸೇವೆಗಳನ್ನು ಒದಗಿಸುತ್ತಾರೆ. ದಿನ-ಶಿಶುಪಾಲನಾ ಕಾರ್ಯ ಕರ್ತೆಯರು ವೈದ್ಯರು ಹೇಳಿದ ಸಲಹೆ ಸೂಚನೆಗಳನ್ನು ಪಾಲಿಸಿ ರೋಗಿಗಳ ಆರೈಕೆ ಮಾಡುತ್ತಾರೆ. ಔಷಧಿಗಳನ್ನು ಆಯಾ ಕೇಂದ್ರದಲ್ಲಿ ನೀಡಲಾಗುತ್ತದೆ. ಕೇಂದ್ರದಲ್ಲಿ ಮಕ್ಕಳ

ಮತ್ತು ಕಟ್ಟಡ ಕಾರ್ಮಿಕರ ಪ್ರಥಮ ಚಿಕಿತ್ಸೆಯ ಅಗತ್ಯತೆಗಳನ್ನೂ ಸಹ ಪೂರೈಸಲಾಗುವುದು. ಚಿಕಿತ್ಸೆಗೆಂದು ಸಮೀಪದ ಆಸ್ಪತ್ರೆಗಳಿಗೆ ಹೋಗಲು ವೈದ್ಯರು ಸೂಚಿಸಿದ ರೋಗಿಗಳನ್ನು ಅವರು ಅಗತ್ಯವಾದ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಖಚಿತಪಡಿಸಲು, ಮೊದಲ ಬಾರಿ ಕುಟುಂಬದ ಸದಸ್ಯರ ಜೊತೆಗೆ ಆಸ್ಪತ್ರೆಗೆ ಸಂಚಾರಿ ಶಿಶು ಕೇಂದ್ರದ ಸಿಬ್ಬಂದಿಯೊಬ್ಬರನ್ನು ಕಳುಹಿಸಿಕೊಡಲಾಗುತ್ತದೆ. ಪೋಷಕರು ಆಸ್ಪತ್ರೆ ವ್ಯವಸ್ಥೆಯೊಂದಿಗೆ ವ್ಯವಹರಿಸಲು ಕಲಿತಿದ್ದಾರೆ ಎಂದಾದ ನಂತರ ಅವರನ್ನೇ ಸ್ವತಃ ಆಸ್ಪತ್ರೆಗಳಿಗೆ ಹೋಗಲು ಸಿಬ್ಬಂದಿ ಬಿಡುತ್ತಾರೆ. ಸಿಬ್ಬಂದಿ ಸದಸ್ಯರಿಗೆ ಆರಂಭದಲ್ಲಿಯೇ ಅನೇಕ ರೋಗ ಲಕ್ಷಣಗಳನ್ನು ಗುರುತಿಸಲು ಮತ್ತು ಸಕಾಲಿಕ ಚಿಕಿತ್ಸೆ ನೀಡಲು ಆವಶ್ಯಕ ಮಾಹಿತಿಯನ್ನು ಹೊಂದಿರುತ್ತಾರೆ. ದತ್ತ ಮಕ್ಕಳು ಬೆಳೆಯುವ, ವಾಸಿಸುವ ಕೊಳಕು ವಾತಾವರಣವು ಮಕ್ಕಳ ಒಟ್ಟಾರೆಯ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಪರಿಹಾರಕ ಚಿಕಿತ್ಸೆಯು ಸಾಲದು. ಆದ್ದರಿಂದ ಹೆಚ್ಚಿನ ಆದ್ಯತೆಯನ್ನು ರೋಗ ನಿರೋಧಕ ಆರೈಕೆಗೆ ನೀಡಲಾಗುತ್ತದೆ.

ಒತ್ತು ನೀಡಿದ ರೋಗ ನಿರೋಧಕ ಕ್ರಮಗಳು ಇವುಗಳನ್ನು ಒಳಗೊಂಡಿವೆ:

- ಪ್ರತಿರಕ್ಷಣಾ ಲಸಿಕೆ
- ನಿಯಮಿತ ಪೂರಕ ಪೌಷ್ಟಿಕಾಂಶ
- ಅಪೌಷ್ಟಿಕತೆಯಿರುವ ಮತ್ತು ಕಾಯಿಲೆ ಬಿದ್ದ ಮಕ್ಕಳಿಗೆ, ವಯಸ್ಕರಿಗೆ, ಗರ್ಭಿಣಿಯರಿಗೆ, ಹಾಲುಣಿಸುವ ತಾಯಂದಿರಿಗೆ ವಿಶೇಷ ಆಹಾರ
- ಆರೋಗ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಪೋಷಕರಿಗೆ ಮತ್ತು ಮಕ್ಕಳಿಗೆ ಕೇಂದ್ರದಲ್ಲಿ ಅರಿವು ಮೂಡಿಸುವುದು

ಎಲ್ಲಾ ಕೇಂದ್ರಗಳಲ್ಲೂ ಪ್ರತಿರಕ್ಷಣಾ ಲಸಿಕೆ ನೀಡುವ ವ್ಯವಸ್ಥೆ ಮಾಡಲಾಗಿರುತ್ತದೆ. ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳ ಕೇಂದ್ರಗಳಲ್ಲಿನ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ಪ್ರತಿರಕ್ಷಣಾ ಲಸಿಕೆಗಳನ್ನು ನೀಡುವ ಜವಾಬ್ದಾರಿಯನ್ನು ಆಯಾ ಬಡವಾಣೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ವಹಿಸಿರುತ್ತವೆ. ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ, ವೈದ್ಯರು ಪ್ರತಿರಕ್ಷಣಾ ಲಸಿಕೆ ಕಾರ್ಯಕ್ರಮವನ್ನು ನಡೆಸುತ್ತಾರೆ. ಆದಾಗ್ಯೂ, ಅನೇಕ ಸಂದರ್ಭಗಳಲ್ಲಿ ಈ ಪ್ರತಿರಕ್ಷಣಾ ಲಸಿಕೆಯ ವೇಳಾಪಟ್ಟಿಯನ್ನು ಯಥಾವತ್ತಾಗಿ ಅನುಸರಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಕಾರ್ಮಿಕರು ಸತತವಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುತ್ತಲೇ ಇರುತ್ತಾರೆ.

ಕೆಲವೊಮ್ಮೆ ಕಣ್ಣು ಮತ್ತು ದಂತದ ಉಚಿತ ತಪಾಸಣಾ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ.

**ಪೂರಕ ಪೌಷ್ಟಿಕಾಂಶ**

ನಿಯತ ಪೂರಕ ಪೌಷ್ಟಿಕಾಂಶ ಕಾರ್ಯಕ್ರಮದ ಅಡಿಯಲ್ಲಿ ಇಡೀ ದಿನ ಪೌಷ್ಟಿಕ ಆಹಾರಗಳನ್ನು, ಅಂದರೆ ಹಾಲು, ಮೊಳಕೆ ಕಾಳು, ಬೇಳೆಕಾಳು, ಆಯಾ ಋತುಮಾನದ ತರಕಾರಿಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಲಾಗುತ್ತದೆ.

ರೋಗನಿರೋಧಕಗಳಾದ A ಮತ್ತು D ವಿಟಮನ್, ಮಲ್ಟಿವಿಟಮಿನ್ಗಳು ಮತ್ತು ಕಬ್ಬಿಣಾಂಶವನ್ನು ಪ್ರಮಾಣದಲ್ಲಿ ನೀಡಲಾಗುತ್ತದೆ. ನಿಗದಿತ ತೂಕಕ್ಕಿಂತ ಕಡಮೆ ತೂಕವಿರುವ ಮಕ್ಕಳು ಮತ್ತು ತಾಯಂದಿರಿಗೆ ಕೇಂದ್ರಕ್ಕೆ ಭೇಟಿ ನೀಡುವ ವೈದ್ಯರು ವಿಶೇಷ ಆಹಾರ ಸೇವಿಸುವಂತೆ ಸಲಹೆ ನೀಡುತ್ತಾರೆ. ಅವರ ಸಲಹೆಯಂತೆ ಅಗತ್ಯವಿರುವ ಆಹಾರವನ್ನು ಒದಗಿಸಲಾಗುತ್ತದೆ.

ಆರೋಗ್ಯ ಮತ್ತು ಪೌಷ್ಟಿಕಾಂಶಗಳ ಬಗ್ಗೆ ತಾಯಂದಿರಿಗೆ, ಮಕ್ಕಳಿಗೆ ಮತ್ತು ಸಮುದಾಯಕ್ಕೆ ಕೇಂದ್ರಗಳಲ್ಲೇ ಆಯೋಜಿಸಲಾದ ಸಮುದಾಯದ ಸಭೆಗಳಲ್ಲಿ, ***ಬಾಲ ಸಭಾ*** (ಮಕ್ಕಳ ವೇದಿಕೆ) ಗಳಲ್ಲಿ, ***ಲೋಕ್ ದೂತ್*** (ಬೀದಿ ನಾಟಕ ಗುಂಪು) ಪ್ರದರ್ಶನಗಳು ಮತ್ತು ಶಿಬಿರಗಳ ಮೂಲಕ ಅರಿವು ಮೂಡಿಸಲಾಗುತ್ತದೆ.

**20.5.2 ಶಿಕ್ಷಣ ಮತ್ತು ಸಂಜ್ಞಾನಾತ್ಮಕ ಬೆಳವಣಿಗೆ**

***ಶಿಶು ಕೇಂದ್ರ ವಿಭಾಗದಲ್ಲಿ*** ಮಕ್ಕಳ ಸಂಜ್ಞಾನಾತ್ಮಕ ಬೆಳವಣಿಗೆಗೆ ವಿಶೇಷ ಗಮನ ನೀಡಲಾಗುತ್ತದೆ. 0-2 ವರ್ಷ ವಯಸ್ಸಿನ ಮಕ್ಕಳ ಕುತೂಹಲವನ್ನು ಉತ್ತೇಜನಗೊಳಿಸಲು ಅವರಿಗೆ ಸುತ್ತ ತಿರುಗುವಂತೆ ನೇತುಹಾಕಬಹುದಾದ ಆಟ ವಸ್ತುಗಳು (mobile), ಗಿಲಕಿಗಳು ಮತ್ತು (ಹತ್ತಿಯಿಂದ ತುಂಬಿಸಲ್ಪಟ್ಟ) ಬೊಂಬೆಗಳಂತಹ ಕಡಮೆ ಬೆಲೆಯ ಬಣ್ಣದ ಆಟದ ವಸ್ತುಗಳನ್ನು ಒದಗಿಸಲಾಗುತ್ತದೆ. ಹೊರಾಂಗಣದಲ್ಲಿ ಆಡಲು ರೂಪಿಸಲಾದ ಆಭಿನಯದೊಂದಿಗೆ ಹಾಡು ಮತ್ತು ದೈಹಿಕ ಚಟುವಟಿಕೆಗಳಿಗೆ ಪ್ರಾಮುಖ್ಯತೆ

ನೀಡಲಾಗುತ್ತದೆ. ಚಿಕ್ಕಮಕ್ಕಳಲ್ಲಿ ಸೃಜನಶೀಲತೆ ಮತ್ತು ಪ್ರಯೋಗಶೀಲ ಮನೋಭಾವವನ್ನು ಬೆಳಸಿಕೊಳ್ಳಲು ಅವರನ್ನು ಮರಳು, ನೀರು, ಮಣ್ಣು ಮತ್ತು ಚೌಕಾ ಮರದ ತುಂಡುಗಳೊಂದಿಗೆ ಆಟವಾಡುವುದನ್ನು ಪ್ರೋತ್ಸಾಹಿಸಲಾಗುತ್ತದೆ.

***ಬಾಲವಾಡಿ (ಶಾಲಾಪೂರ್ವ) ವಿಭಾಗವು*** 3-6 ವಯಸ್ಸಿನ ಮಕ್ಕಳಿಗಾಗಿ ಇದೆ. ಇಲ್ಲಿ, ಮಕ್ಕಳಿಗೆ ಶಾಲಾಪೂರ್ವ ಶೈಕ್ಷಣಿಕ ಸಾಮಗ್ರಿಗಳು, ಕಥೆಗಳು, ಶಿಶುಗೀತೆಗಳು, ಪದ್ಯಗಳು ಮತ್ತು ಮುಕ್ತ ಆಟದ ಮುಖಾಂತರ ಸರಳ ಶೈಕ್ಷಣಿಕ ಪರಿಕಲ್ಪನೆಗಳನ್ನು ಪರಿಚಯಿಸಲಾಗುತ್ತದೆ.

***ಅನೌಪಚಾರಿಕ ಶಿಕ್ಷಣ ವಿಭಾಗದಲ್ಲಿ*** ಅಥವಾ ಪ್ರಾಥಮಿಕ ವಿಭಾಗದಲ್ಲಿ, 6-12 ವಯಸ್ಸಿನ ಮಕ್ಕಳಿಗೆ ಅನೌಪಚಾರಿಕ ವಿಧಾನಗಳ ಮೂಲಕ ಬೋಧಿಸಲಾಗುವುದು. ಆಟದ ಮೂಲಕ ಕಲಿಸುವ ಪಾಠ ವಿಧಾನಗಳು; ವ್ಯವಸ್ಥಿತ ಆಟ; ಕಾಗದ, ಎಲೆಗಳು, ವೃತ್ತಪತ್ರಿಕೆಗಳು, ಹಳೆಯ ಪತ್ರಿಕೆಗಳು, ಬಣ್ಣದ ಬಳಪಗಳು, ತ್ಯಾಜ್ಯ ವಸ್ತುಗಳನ್ನು ಬಳಸಿ ಚಟುವಟಿಕೆಗಳು; ಮತ್ತು ಫ್ಲಾಶ್ಕಾರ್ಡ್‌ಗಳು ಶಾಲೆಗೆ ಹೋಗದ ಮಕ್ಕಳಿಗೆ ಕಲಿಕೆಯು ಆಸಕ್ತಿದಾಯಕ ಮತ್ತು ಆಕರ್ಷಣೀಯವನ್ನಾಗಿಸುತ್ತದೆ. ಕ್ರಮೇಣವಾಗಿ, ಮಕ್ಕಳು ಔಪಚಾರಿಕ ಶಾಲಾಶಿಕ್ಷಣ ವ್ಯವಸ್ಥೆಗೆ ಸುಲಭವಾಗಿ ಪ್ರವೇಶಪಡೆಯುವುದನ್ನು ಸಾಧ್ಯವಾಗಿಸಲು, ಸ್ಥಳೀಯ ಶಾಲೆಗಳಲ್ಲಿ ಉಪಯೋಗಿಸುವ ಪಠ್ಯಪುಸ್ತಕಗಳಿಗೆ ಅವರನ್ನು ಪರಿಚಯಿಸಲಾಗುತ್ತದೆ.

***ಎಲ್ಲಾ ದೊಡ್ಡ ಮಕ್ಕಳನ್ನು ನೆರೆಹೊರೆಯ ಶಾಲೆಗಳಿಗೆ ಪ್ರವೇಶ ಪಡೆಯುವಂತೆ ಪ್ರೋತ್ಸಾಹಿಸಲಾಗುತ್ತದೆ.*** ಸಂಚಾರಿ ಶಿಶು ಕೇಂದ್ರಗಳ ದಿನ-ಶಿಶುಪಾಲನಾ ಕೇಂದ್ರದ ಕಾರ್ಯ ಕರ್ತರು ಈ ಮಕ್ಕಳು ಶಾಲೆಯಿಂದ ಬಂದ ಮೇಲೆ ಅವರಿಗೆ ಮನೆ-ಪಾಠ ಕೆಲಸ ಮಾಡಲು ಸಹಾಯ ಮಾಡುತ್ತಾರೆ. ಇದರ ಮುಖ್ಯ ಉದ್ದೇಶವೇನೆಂದರೆ, ಈ ಮಕ್ಕಳು ಮುಖ್ಯವಾಹಿನಿಯೊಂದಿಗೆ ಬೆರೆಯಬೇಕು ಮತ್ತು ಶಾಲೆಗೆ ಹೋಗದ ಮಕ್ಕಳ ಸಂಖ್ಯೆ ಕಡಮೆಯಾಗಬೇಕು ಎಂಬುದೇ ಆಗಿದೆ. ಉದಾಹರಣೆಗೆ, 1993-94ರಲ್ಲಿ 514 ಮಕ್ಕಳು ಪುರಸಭಾ ಶಾಲೆಗಳಿಗೆ(ದೆಹಲಿ, ಬಾಂಬೆ, ಪೂನಾ ಒಟ್ಟಾರೆ ಸೇರಿ) ಪ್ರವೇಶ ಪಡೆದರು. ಇವರಲ್ಲಿ 328 ಮಕ್ಕಳು ಉತ್ತೀರ್ಣರಾದರು, 15 ಮಕ್ಕಳು ನಪಾಸಾದರು ಮತ್ತು 37 ಮಕ್ಕಳು ಶಾಲೆ ಬಿಟ್ಟಿದ್ದರು.

***ವಿದ್ಯಾರ್ಥಿ ವೇತನಾ ಯೋಜನೆಯೊಂದಿದ್ದು*** ಅದು ಮಕ್ಕಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ - 7 ನೇ ತರಗತಿಯವರೆಗೆ ತಿಂಗಳಿಗೆ ರೂ 50 ಮತ್ತು 9, ಅದಕ್ಕಿಂತ ಹೆಚ್ಚಿನ ತರಗತಿಯವರಿಗೆ ತಿಂಗಳಿಗೆ ರೂ 1001 ನೀಡಲಾಗುತ್ತದೆ. 1994 ರಲ್ಲಿ ಸಂಚಾರಿ ಶಿಶು ಕೇಂದ್ರಗಳಿಂದ ಹಣ ಸಹಾಯ ಪಡೆದ ಮಕ್ಕಳ ಸಂಖ್ಯೆ 98 ಆಗಿತ್ತು.

ಅನೇಕ ಗುಂಪು ಚಟುವಟಿಕೆಗಳನ್ನು ಕೂಡ ನಡೆಸಲಾಗುತ್ತದೆ.

*ಬಾಲ ಸಭಾ* ಮಕ್ಕಳ ವೇದಿಕೆಯಾಗಿದ್ದು ಇದು ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದನ್ನು ಪ್ರೋತ್ಸಾಹಿಸುತ್ತದೆ. ಈ ವೇದಿಕೆಯು ನಟನೆ-ಆಟ (role-play) ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವುದರೊಂದಿಗೆ, ಚರ್ಚೆಗಳ ಮೂಲಕ ಅನೇಕ ವಿಷಯಗಳ ಬಗ್ಗೆ ಅರಿವು ಮೂಡಿಸುತ್ತದೆ. *ಬಾಲ ಸಭಾ* ಗಳು ಪ್ರತಿ ಶನಿವಾರ ನಡೆಯುತ್ತವೆ. ಐತಿಹಾಸಿಕ ಸ್ಥಳಗಳಿಗೆ, ವಸ್ತು ಸಂಗ್ರಹಾಲಯಗಳಿಗೆ ಮತ್ತು ಉದ್ಯಾನವನಗಳಿಗೆ ಭೇಟಿ ನೀಡಲಾಗುತ್ತದೆ.

*ಬಾಲ ಮೇಳವು (ಮಕ್ಕಳ ಮೇಳ)* ವಲಯಮಟ್ಟದಲ್ಲಿ ನಡೆಯುತ್ತದೆ. ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಯಾವುದಾದರೂ ಒಂದು ವಿಷಯವನ್ನು ಆರಿಸಲಾಗುತ್ತದೆ. ಈ ಬಾಲ ಮೇಳವು ಒಂದು ವಲಯದ (ಸುಮಾರು ಆರು ಕೇಂದ್ರಗಳ) ಮಕ್ಕಳು ಮತ್ತು ಸಿಬ್ಬಂದಿ ಒಟ್ಟಿಗೆ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತದೆ. ಇದರೊಂದಿಗೆ ಬೇರೆಬೇರೆ ವಲಯದ ಮಕ್ಕಳು, ಸಿಬ್ಬಂದಿಯೂ ಪರಸ್ಪರರ ಬಾಲ ಮೇಳಗಳಿಗೆ ಭೇಟಿ ನೀಡುತ್ತಾರೆ ಮತ್ತು ಅವರ ನಡುವೆ ವಿಚಾರಗಳ ಸಕಾರಾತ್ಮಕ ಸಂವಾದ ನಡೆಯುತ್ತದೆ. ಮಕ್ಕಳ ಪೋಷಕರು ಮತ್ತು ಇತರರು ಮೇಳಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ, ಇದರಿಂದ ಮಕ್ಕಳು ಹಾಗೂ ಸಿಬ್ಬಂದಿಯೊಡನೆ ಕಲೆತು ಬೆರೆಯಲು ಉತ್ತಮ ಅವಕಾಶ ಒದಗುತ್ತದೆ.

ವರ್ಷಕ್ಕೆ ಒಂದು ಅಥವಾ ಎರಡು ಸಲ ಮಕ್ಕಳ ಶಿಬಿರ (ಒಂದು ದಿನ, ರಾತ್ರಿ ಅಥವಾ ಮೂರು ದಿನ) ಗಳನ್ನು ಮತ್ತು ಕ್ರೀಡಾ ಚಟುವಟಿಕೆ ದಿನಗಳನ್ನೂ ಆಯೋಜಿಸಲಾಗುತ್ತದೆ.

**20.5.3 ಸಮುದಾಯಕ್ಕೆ ಬೆಂಬಲ ನೀಡುವಿಕೆ**

ನೀವೀಗ ಓದಿದಂತೆ ಸಂಚಾರಿ ಶಿಶು ಕೇಂದ್ರಗಳು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿನ ಸಮುದಾಯಕ್ಕೆ ಅನೇಕ ಆರೋಗ್ಯ ಪರಿಕಾರಕ ಮತ್ತು ನಿರೋಧಕ ಸೇವೆಗಳನ್ನು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುತ್ತವೆ.

ಸಂಚಾರಿ ಶಿಶು ಕೇಂದ್ರಗಳಿಗೆ ಸಂಬಂಧಿಸಿದಂತೆ, ಘಟಕ 32 ಅಂದರೆ, ಬ್ಲಾಕ್ 7, DECE-17 "ಸಮುದಾಯ ಮತ್ತು ಕುಟುಂಬವನ್ನು ತೊಡಗಿಸಿಕೊಳ್ಳುವ", ಸಮುದಾಯದ ಸಹಭಾಗಿತ್ವದ ಬಗ್ಗೆ ನೀವು ಓದಿದ್ದು ನೆನಪಿದೆಯೇ? ಅದರ ವಿಶಿಷ್ಟ ಲಕ್ಷಣಗಳನ್ನು ಪುನರವಲೋಕನ ಮಾಡೋಣ.

ಪೋಷಕರು ಮತ್ತು ಸಮುದಾಯವನ್ನು ತೊಡಗಿಸಿಕೊಳ್ಳುವ, ಅವರ ಅಗತ್ಯಗಳನ್ನು ಪೂರೈಸುವಂಥ ಚಟುವಟಿಕೆಗಳು ನಿರಂತರವಾಗಿ ಆಯೋಜಿಸಲಾಗುತ್ತವೆ.

- ವಯಸ್ಕರಿಗೆ ಶಿಕ್ಷಣ ನೀಡುವುದು ಸಂಚಾರಿ ಶಿಶು ಕೇಂದ್ರಗಳ ನಿರಂತರ ಚಟುವಟಿಕೆಯಾಗಿದ್ದು ಅಲ್ಲಿ ಆರೋಗ್ಯ, ನೈರ್ಮಲ್ಯ, ಪೌಷ್ಟಿಕಾಂಶ, ಕುಟುಂಬ ಯೋಜನೆ, ರೋಗತಡೆ ಕ್ರಮಗಳು, ಕಾಯಿಲೆ ಬಿದ್ದಾಗ ಚಿಕಿತ್ಸೆ ನೀಡುವುದು, ಮತ್ತು ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರಿಗೆ ವಿಶೇಷ ಆರೈಕೆ ನೀಡುವುದು ಮುಂತಾದ ವಿಷಯಗಳ ಮೇಲೆ ಕೇಂದ್ರೀಕರಿಸಲಾಗುತ್ತದೆ.
- ತಾಯಂದಿರಿಗಾಗಿ ನಿಯತವಾಗಿ ಮಾಸಿಕ, ತ್ರೈಮಾಸಿಕ ಸಭೆಗಳು ನಡೆಯುತ್ತವೆ. ಉದಾಹರಣೆಗೆ, ಮಕ್ಕಳಿಗೆ ಹಾಲುಣಿಸಲು ತಾಯಂದಿರು ಕೇಂದ್ರಕ್ಕೆ ಬಂದಾಗ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಾಸಂಗಿಕ ಚರ್ಚೆಗಳು ನಡೆಯುತ್ತವೆ.
- ಶಿಶು ಕೇಂದ್ರಗಳ ಕಾರ್ಯ ಕರ್ತರು ಆಗಾಗ್ಗೆ ಮನೆಮನೆಗೆ ಭೇಟಿ ನೀಡಿ ಪೋಷಕರು ಮತ್ತು ಇತರ ಸಮುದಾಯದ ಸದಸ್ಯರನ್ನು ಒಟ್ಟಿಗೆ ಸೇರಿಸಿ ಅವರೊಂದಿಗೆ ಮಾತನಾಡಲು ಸಂದರ್ಭ ಅವಕಾಶಗಳನ್ನು ಕಂಡುಕೊಳ್ಳುತ್ತಾರೆ.
- ಮಕ್ಕಳಿಗೆ, ಪೋಷಕರಿಗೆ ಮತ್ತು ಸಮುದಾಯದ ಸದಸ್ಯರಿಗೆ ಗುಂಪು ಚಟುವಟಿಕೆಗಳನ್ನು ಆಯೋಜಿಸಲಾಗುತ್ತವೆ.
- ಸಾಮಾನ್ಯವಾಗಿ ***ಕ್ಷೇತ್ರೀಯ ನಾಟಕ ಮಂಡಳಿಯ*** ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ. ಈ ಗುಂಪು ನಾಟಕ ಮಾಡಲು ಸಹಜ

ಕೌಶಲವಿರುವ ಸಂಚಾರಿ ಶಿಶು ಕೇಂದ್ರಗಳ ಸಿಬ್ಬಂದಿ ಸದಸ್ಯರನ್ನು ಒಳಗೊಂಡಿರುತ್ತದೆ. ಸಮುದಾಯಕ್ಕೆ ಸಂದೇಶಗಳನ್ನು ತಲುಪಿಸಲು ಅವರು ನಾಟಕ ಪ್ರದರ್ಶನಗಳನ್ನು ಮಾಡುತ್ತಾರೆ ಮತ್ತು ಹಾಡುಗಳನ್ನು ಹಾಡುತ್ತಾರೆ.

- *ಲೋಕ್ ದೂತ್* ಎನ್ನುವುದು ಮತ್ತೊಂದು ಪ್ರದರ್ಶಕ ಗುಂಪು. ಇದು ಕೂಡ ಸಂಚಾರಿ ಶಿಶು ಕೇಂದ್ರಗಳ ಒಂದು ಭಾಗ. ಈ ತಂಡವು ಆಗಾಗ್ಗೆ ಸಮುದಾಯದಲ್ಲಿ ನಾಟಕ ಪ್ರದರ್ಶನಗಳನ್ನು ಮಾಡುತ್ತದೆ. ಸಂದರ್ಭ ಸೂಕ್ತ ವಿಷಯಗಳನ್ನು ತೆಗೆದುಕೊಂಡು ಅದರ ಬಗ್ಗೆ ಸಮುದಾಯ ಸದಸ್ಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳನ್ನು ಮಾಡುತ್ತದೆ. ಇದರ ಉದ್ದೇಶ ಶಿಕ್ಷಣ ಮತ್ತು ಮನರಂಜನೆ ಎರಡನ್ನೂ ಒದಗಿಸುವುದಾಗಿದೆ.
- ಸಂಚಾರಿ ಶಿಶು ಕೇಂದ್ರಗಳು ಹೊಸ ಅಕ್ಷರಸ್ಥರಿಗಾಗಿ ಪುಸ್ತಕಗಳನ್ನು ಪ್ರಕಟಿಸುತ್ತವೆ. ಸಮುದಾಯದ ಕಾರ್ಮಿಕರಿಗಾಗಿ ***"ಏಕಲವ್ಯ"*** ಎಂಬ ವಾರ್ಷಿಕ ಪತ್ರಿಕೆಯನ್ನು ಪ್ರಕಟಿಸುತ್ತದೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 2

1. ಕೆಳಗಿನ ಹೇಳಿಕೆಗಳು "ಸರಿಯೇ" "ತಪ್ಪೇ" ತಿಳಿಸಿ. ತಪ್ಪಿರುವ ಹೇಳಿಕೆಗಳನ್ನು ಸರಿಮಾಡಿ ಬರೆಯಿರಿ.

i. ಸಂಚಾರಿ ಶಿಶು ಕೇಂದ್ರಗಳು ದೆಹಲಿ, ಕಾನ್ಪುರ ಮತ್ತು ಲಕ್ನೋದಲ್ಲಿ ದಿನ-ಶಿಶುಪಾಲನಾ ಕೇಂದ್ರಗಳನ್ನು ನಡೆಸುತ್ತವೆ.

________________________________________

________________________________________

ii. ಸಂಚಾರಿ ಶಿಶು ಕೇಂದ್ರಗಳಿಗೆ ಬರುವ ಬಹುತೇಕ ಮಕ್ಕಳು ಪುನರ್ವಸತಿ ಕಾಲೋನಿ ಮತ್ತು ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ.

________________________________________

________________________________________

iii. ಒಂದು ನಿರ್ದಿಷ್ಟ ಸಂಚಾರಿ ಶಿಶು ಕೇಂದ್ರದಲ್ಲಿ ಮಕ್ಕಳ ನಿರಂತರ ಹಾಜರಾತಿ ಅವಧಿ ಬಹುತೇಕ ಸಂದರ್ಭಗಳಲ್ಲಿ ಒಂದು ತಿಂಗಳಿಗೂ ಕಡಮೆಯಾಗಿರುತ್ತದೆ ಎಂದು ತಿಳಿದುಬಂದಿದೆ.

________________________________________

________________________________________

iv. ಸಂಚಾರಿ ಶಿಶು ಕೇಂದ್ರಗಳ ಕಾರ್ಯಕ್ರಮವನ್ನು ಮೂರು ಮುಖ್ಯಭಾಗಗಳಾಗಿ ವಿಂಗಡಿಸಬಹದು - ಪೂರಕ ಪೌಷ್ಟಿಕಾಂಶ, ಪ್ರತಿರಕ್ಷಣಾ ಲಸಿಕೆ, ಮತ್ತು ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ.

________________________________________

________________________________________

v. ಸಂಚಾರಿ ಶಿಶು ಕೇಂದ್ರಗಳು 0-5 ರ ವಯಸ್ಸಿನ ಮಕ್ಕಳಿಗೆ ಆರೋಗ್ಯ ಆರೈಕೆ ಸೇವೆಗಳನ್ನು ಒದಗಿಸುತ್ತವೆ.

________________________________________

________________________________________

2. ಸಂಚಾರಿ ಶಿಶು ಕೇಂದ್ರಗಳ ಕಾರ್ಯ ಕರ್ತರು ಸಮುದಾಯಕ್ಕೆ ಬೆಂಬಲ ನೀಡುವ ಯಾವುದಾದರೂ ಐದು ಮುಖ್ಯ ಸೇವೆಗಳನ್ನು ಪಟ್ಟಿಮಾಡಿ.

________________________________________

________________________________________

________________________________________

________________________________________

________________________________________

## 20.6 ಸಂಚಾರಿ ಶಿಶು ಕೇಂದ್ರಗಳು - ಕೆಲವು ಸಾಂಸ್ಥಿಕ ಅಂಶಗಳು

ಕಾರ್ಯಾಚರಣೆಯ ಮಟ್ಟದಲ್ಲಿ ಈ ಸಂಚಾರಿ ಶಿಶು ಕೇಂದ್ರಗಳ ವ್ಯವಸ್ಥೆಯು ಅದರ ಕಾರ್ಯಕ್ರಮಕ್ಕೆ ಹೇಗೆ ಕೊಡುಗೆ ನೀಡುತ್ತದೆ ಎಂಬುದರ ಬಗ್ಗೆ ಒಂದು

ಒಳನೋಟವನ್ನು ಪಡೆಯಲು ನಾವೀಗ ಅದರ ಕೆಲವು ಸಾಂಸ್ಥಿಕ ಅಂಶಗಳತ್ತ ಗಮನ ಹರಿಸೋಣ.

ಮೊದಲಿಗೆ ಸಂಚಾರಿ ಶಿಶು ಕೇಂದ್ರಗಳ ಸಾಂಸ್ಥಿಕ ರಚನೆಯತ್ತ ಗಮನ ಹರಿಸೋಣ. ಚಿತ್ರ 20.1 ನೀತಿನಿಯಮಗಳನ್ನು ರೂಪಿಸುವ ಸಂಸ್ಥೆಯ ಮೇಲ್-ಮಟ್ಟದಲ್ಲಿನ ಮಂಡಳಿಗಳನ್ನು ಉಲ್ಲೇಖಿಸುತ್ತದೆ.

**ಸಾಮಾನ್ಯ ಮಂಡಳಿ**

**ಆಡಳಿತ ಮಂಡಳಿ**

**ದುಡಿಯುವ ತಾಯಂದಿರ ಮಕ್ಕಳಿಗಾಗಿ ಸಂಚಾರಿ ಶಿಶು ಕೇಂದ್ರಗಳು**

**ದೆಹಲಿ ವಿಭಾಗ** | **ಬಾಂಬೆ ವಿಭಾಗ**

**ಪೂನಾ ಉಪ ವಿಭಾಗ**

ಕಾರ್ಯ ನಿರ್ವಾಹಕ ಸಮಿತಿ | ಕಾರ್ಯ ನಿರ್ವಾಹಕ ಸಮಿತಿ

ಕಾರ್ಯಕಾರಿ ಸಮಿತಿಗಳು

**ಚಿತ್ರ 20.1: ಸಂಚಾರಿ ಶಿಶು ಕೇಂದ್ರಗಳ ನೀತಿನಿಯಮ ರೂಪಿಸುವ ಪ್ರಮುಖ ಕಾರ್ಯನಿರ್ವಾಹಕ ಮಂಡಳಿಗಳು**

ಚಿತ್ರ 20.2 ಸಾಂಸ್ಥಿಕ ರಚನೆಯ ರೂಪರೇಷೆಗಳನ್ನು ತೋರಿಸುತ್ತದೆ. ನೀವು ನೋಡುವಂತೆ ಅಲ್ಲಿ ಕಾರ್ಯಕ್ರಮವನ್ನು ತಲುಪಿಸುವಲ್ಲಿ ವಿವಿಧ ಉಪ ರಚನೆಗಳು ಮತ್ತು ಕಾರ್ಯ ಪಡೆ ಗುಂಪುಗಳು ಒಳಗೊಂಡಿವೆ.

**ದುಡಿಯುವ ತಾಯಂದಿರ ಮಕ್ಕಳಿಗಾಗಿ ಸಂಚಾರಿ ಶಿಶು ಕೇಂದ್ರಗಳು**

**ಸಂಚಾರಿ ಶಿಶು ಕೇಂದ್ರಗಳು (ವಿಭಾಗ-ದೆಹಲಿ)** | **ಆಡಳಿತ** | MCIRC | **ಸಂಚಾರಿ ಶಿಶು ಕೇಂದ್ರಗಳು (ವಿಭಾಗ-ಬಾಂಬೆ)**

**ಕಛೇರಿ** **ಕ್ಷೇತ್ರ**

**ಕ್ಷೇತ್ರ**

ಹಣಕಾಸು PCO

PCO

ಆಡಳಿತ APCO

ಅಧಿಕಾರಿಗಳು

ತರಬೇತಿ TCO

ZPOS

AZPOS

ಕ್ಷೇತ್ರ ಕಾರ್ಯಕರ್ತರು

ಮೇಲ್ವಿಚಾರಕರು

ಉಸ್ತುವಾರಿಗಳು

ಕ್ಷೇತ್ರ ಕಾರ್ಯ ಕರ್ತರು

**ಕಛೇರಿ**

ಹಣಕಾಸು

ಆಡಳಿತ ಕಾರ್ಯಕ್ರಮ

ತರಬೇತಿ ಮೇಲ್ವಿಚಾರಕರು

ಉಸ್ತುವಾರಿಗಳು

**ಸಂಚಾರಿ ಶಿಶು ಕೇಂದ್ರಗಳು (ಪೂನಾ ಉಪವಿಭಾಗ)**

ಕ್ಷೇತ್ರ

PCO

ಕಾರ್ಯಕ್ರಮ ಅಧಿಕಾರಿಗಳು

ಮೇಲ್ವಿಚಾರಕರು

ಉಸ್ತುವಾರಿಗಳು

ಕ್ಷೇತ್ರ ಕಾರ್ಯ ಕರ್ತರು

MCIRC - ಸಂಚಾರಿ ಶಿಶು ಕೇಂದ್ರಗಳ ಮಾಹಿತಿ ಸಂಪನ್ಮೂಲ ಕೇಂದ್ರ

PCO - ಕಾರ್ಯಕ್ರಮ ಸಂಯೋಜಕ

APCO - ಸಹಾಯಕ ಕಾರ್ಯಕ್ರಮ ಸಂಯೋಜಕ

TCO- ತರಬೇತಿ ಸಂಯೋಜಕ

ZPOS – ವಲಯ ಯೋಜನಾ ಅಧಿಕಾರಿಗಳು

AZPOS - ಸಹಾಯಕ ಯೋಜನಾ ಅಧಿಕಾರಿಗಳು

**ಚಿತ್ರ 20.2 ಸಂಚಾರಿ ಶಿಶು ಕೇಂದ್ರಗಳ ಸಾಂಸ್ಥಿಕ ರಚನೆ**

ಈ ಹಿನ್ನೆಲೆಯಲ್ಲಿ, ನಾವೀಗ ಸಂಚಾರಿ ಶಿಶು ಕೇಂದ್ರಗಳ ಕಾರ್ಯಕ್ರಮದ ತಲುಪಿಸುವಿಕೆ ಮತ್ತು ಪರಿಣಾಮಕಾರಿತ್ವವನ್ನು ಪರಿಣಾಮಿಸುವ ಅದರ ಕೆಲವು ಪ್ರಮುಖ ಸಾಂಸ್ಥಿಕ ಲಕ್ಷಣಗಳನ್ನು ಪರಿಶೀಲಿಸೋಣ.

## 20.6.1 ಸಮಗ್ರೀಕರಣದ ತತ್ವ

ಸಂಚಾರಿ ಶಿಶು ಕೇಂದ್ರಗಳಲ್ಲಿ, ಅದರ ವಿವಿಧ ಪ್ರವರ್ಗಗಳ ಕಾರ್ಯ ಕರ್ತರು ಒಪ್ಪಿಕೊಂಡ, ಅಂತರ್ಗತಮಾಡಿಕೊಂಡು ಕಾರ್ಯರೀತಿಯಲ್ಲಿ ಅಳವಡಿಸಿಕೊಂಡ ಒಂದು ಬಹುಮುಖ್ಯ ಸಾಂಸ್ಥಿಕ ತತ್ವವೆಂದರೆ ಅದು *"ಸಮಗ್ರೀಕರಣ".* ಇದು ಹಲವಾರು ಹಂತಗಳಲ್ಲಿ ಕಂಡುಬರುತ್ತದೆ:

- ಎಳೆಯ ಶಿಶುಗಳು ಮತ್ತು ಹಿರಿಯ ಮಕ್ಕಳನ್ನು ಒಂದೇ ಕೇಂದ್ರದಲ್ಲಿ ಒಟ್ಟುಗೂಡಿಸಲಾಗಿರುತ್ತದೆ ಮತ್ತು ಪ್ರತಿ ವಯಸ್ಸಿನ ಗುಂಪಿಗೆ ಸೂಕ್ತವಾದ ಚಟುವಟಿಕೆಗಳನ್ನು ಆಯೋಜಿಸಲಾಗಿರುತ್ತದೆ.
- ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ, ಆಟ ಮತ್ತು ಸಂಜ್ಞಾನಾತ್ಮಕ ಚಟುವಟಿಕೆಗಳು, ನಾಟಕ, ಸಂಗೀತ ಮತ್ತು ಕಲೆ - ಇವೆಲ್ಲವೂ ದೈನಂದಿನ ವೇಳಾಪಟ್ಟಿಯೊಳಗೆ ಸಂಯೋಜಿಸಲಾಗಿರುತ್ತವೆ.
- ಯಾವುದೇ ಒಂದೇ ವಿಷಯದಲ್ಲಿ ಪರಿಣತಿ ಹೊಂದುವ ಬದಲು ಪ್ರತಿಯೊಬ್ಬ ಸಿಬ್ಬಂದಿಯು ಬಹುವಿಧದ ಕೌಶಲ್ಯಗಳನ್ನು ಬೆಳಸಿಕೊಂಡು ಬಹುಕೌಶಲವುಳ್ಳ ಕಾರ್ಯ ಕರ್ತರಾಗುತ್ತಾರೆ.
- ತರಬೇತಿ ಮತ್ತು ಮೇಲ್ವಿಚಾರಣೆ ಎರಡನ್ನು ಒಂದೇ ವ್ಯಕ್ತಿ ಮಾಡುತ್ತಾರೆ. ಅಂದರೆ, ತರಬೇತಿದಾರರು ವ್ಯವಸ್ಥೆಯ ಭಾಗವಾಗಿಯೇ ಇರುತ್ತಾರೆಯೇ ಹೊರತು ಹೊರಗಿನಿಂದ ಬಂದವರಾಗಿರುವುದಿಲ್ಲ.
- ಸಂಚಾರಿ ಶಿಶು ಕೇಂದ್ರಗಳ ಕೇಂದ್ರವು ಅದು ಸೇವೆ ಒದಗಿಸುತ್ತಿರುವ ಸಮುದಾಯದಿಂದ ಪ್ರತ್ಯೇಕವಾಗಿರುವುದಿಲ್ಲ, ಬದಲಿಗೆ ಕುಟುಂಬಗಳೊಂದಿಗೆ ನಿಕಟ ಸಂಬಂಧಗಳನ್ನು ಹೊಂದಿದ್ದು, ಅವುಗಳ ಅವಶ್ಯಕತೆಗಳಿಗೆ ಸ್ಪಂದಿಸುತ್ತವೆ.

*“ಸ್ವಯಂಸೇವಾ ಸಂಸ್ಥೆಗಳನ್ನು ನಿರ್ವಹಣೆ ಮಾಡುತ್ತಿರುವವರು ಈ ಸಮಗ್ರೀಕರಣದ ವಿಧಾನವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ”.*

ಶಿಶುಪಾಲನಾ ಕಾರ್ಯಕ್ರಮದಲ್ಲಿ ವಿವಿಧ ವಯಸ್ಸಿನ ಮಕ್ಕಳನ್ನು ಸಂಘಟಿಸುವುದರ ಬಗ್ಗೆ ಮತ್ತು ಚಟುವಟಿಕೆಗಳನ್ನು ಸಂಯೋಜಿಸಲಾಗುವುದರ ಬಗ್ಗೆ ನೀವು ಈಗಾಗಲೇ ಪರಿಚಿತರಾಗಿದ್ದಿರಿ. ನಾವೀಗ ಈ ಕ್ಷೇತ್ರಕ್ಕೆ ಪ್ರಸ್ತುತವಾದ ಹಲವಾರು ಕೌಶಲಗಳನ್ನು ಹೊಂದಿರುವ ಕಾರ್ಯ ಕರ್ತರ ಅಗತ್ಯವಿರುವ ಅಂಶವನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸೋಣ.

### 20.6.2 ಬಹುವಿಧ ಕೌಶಲ ಕಾರ್ಯ ಕರ್ತೆಯರು

ಸಂಚಾರಿ ಶಿಶು ಕೇಂದ್ರಗಳ ಸಿಬ್ಬಂದಿ ಮಾತ್ರವಲ್ಲ, ಕೇಂದ್ರಗಳಿಗೆ ಬರುವ ಸ್ವಲ್ಪ ಸಮಯ ಕೊಡಲು ತಯಾರಿರುವ ಮತ್ತು ಒಂದೆರಡು ವಿಷಯಗಳಲ್ಲಿ ಪರಿಣತಿ ಹೊಂದಿರುವ ಸ್ವಯಂಸೇವಕರು ಸಹ ಬಹುವಿಧದ ಸಾಮರ್ಥ್ಯಗಳನ್ನು ಬೆಳಸಿಕೊಳ್ಳುವ ಅಗತ್ಯವಿದೆ ಎಂದು ಅವಳು/ಅವನು ಕಂಡುಕೊಳ್ಳುತ್ತಾರೆ. ಅದೇ ಕಾರ್ಯ ಕರ್ತರು ಬಡ್ಜೆಟ್ಟು (ಆಯವ್ಯಯದ ಅಂದಾಜನ್ನು) ಅನ್ನು ತಯಾರಿಸಬೇಕು, ಹಣಕಾಸಿನ ನಿರ್ವಹಣೆ ಮಾಡಬೇಕು, ನಿಧಿ ಸಂಗ್ರಹಿಸಬೇಕು, ಸಭೆಗಳ ನಡಾವಳಿಯನ್ನು ದಾಖಲಿಸಬೇಕು, ಪತ್ರಿಕಾ ಸಂದರ್ಶನಗಳನ್ನು ನೀಡಬೇಕು, ಯೋಜನೆಯ ಪ್ರಸ್ತಾವನೆಗಳನ್ನು ಬರೆಯಬೇಕು ಮತ್ತು ಇವೆಲ್ಲದರೊಂದಿಗೆ ಹೊಸ ಉದ್ಯೋಗಿಗಳಿಗೆ ಸಂಪನ್ಮೂಲರಾಗಿ ಸೇವಾ-ನಿರತ ತರಬೇತಿಯನ್ನೂ ನೀಡಬೇಕು. ಇಷ್ಟೊಂದು ಸಾಮರ್ಥ್ಯಗಳನ್ನು ಹೊಂದಿರುವುದು ಎಲ್ಲರಿಗೂ ಸಾಧ್ಯವಿಲ್ಲದಿರಬಹುದು, ಆದರೆ ಹೆಚ್ಚುಕಡಮೆ ಎಲ್ಲಾ ಕಾರ್ಯ ಕರ್ತರು ವೈವಿಧ್ಯಮಯ ಮತ್ತು ನಾನಾರೀತಿಯದ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸುಸಜ್ಜಿತರಾಗಿರುತ್ತಾರೆ.

ಆದಗ್ಯೂ, ಸ್ವಯಂಸೇವಕರು ಮತ್ತು ಸಂಬಳ ಪಡೆಯುವ ಸಿಬ್ಬಂದಿಗಳು ನಿರ್ವಹಿಸುವ ಸಂಘಟಿತ ಮತ್ತು ಸಮಗ್ರ ರೂಪದ ಕಾರ್ಯಗಳು ಸಂಸ್ಥೆಯ ಪ್ರಮುಖ ತತ್ವವನ್ನು ಬಿಂಬಿಸಿದರೂ, ಬಹುವಿಧ ಕೌಶಲಗಳ ಕಾರ್ಯ ಕರ್ತರ ಅಗತ್ಯತೆಯನ್ನು ಗುರುತಿಸಿ ಕೇಂದ್ರಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆಂದು ವ್ಯವಸ್ಥೆಗಳನ್ನು ಸ್ಥಾಪಿಸಲಾಯಿತು. ಉದಾಹರಣೆಗೆ, ಹಾಲಿನ ಪುಡಿ, ಗೋಧಿ ಮತ್ತು ಎಣ್ಣೆಗಳಂತಹ ದಿನಸಿ ಪದಾರ್ಥಗಳನ್ನು

ಖರೀದಿಸಿ, ಸಂಗ್ರಹಿಸಿ, ವಿತರಿಸಲು, ಕಾರ್ಯಾಚರಣೆ ಕೌಶಲಗಳನ್ನು ಹೊಂದಿರುವ ಉಸ್ತುವಾರಿ ಮಾಡುವ ವ್ಯಕ್ತಿಯೊಬ್ಬರ ಅಗತ್ಯವಿದೆ. ಅದೇರೀತಿ, ಲೆಕ್ಕವ್ಯವಹಾರ ಗೊತ್ತಿರುವ ಲೆಕ್ಕಪತ್ರಗಳನ್ನಿಡುವ, ಬಡ್ಜೆಟ್ಟ್ ಅನ್ನು ತಯಾರಿಸಲು ಸಹಾಯ ಮಾಡುವುದು ಮತ್ತು ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಏಳುವ ಪ್ರಶ್ನೆಗಳಿಗೆ ಉತ್ತರಿಸುವ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸುವರೊಬ್ಬರ ಅಗತ್ಯವಿದೆ. ಆದ್ದರಿಂದ ವಿಶೇಷ ಪಾತ್ರಗಳು ಮತ್ತು ಜವಾಬ್ದಾರಿಗಳಿಗೆ ಹೊಂದಿಸಿದಂತ ಕೆಲಸದ ವೇಳೆಗಳು ಇರುತ್ತವೆ. ಹೀಗೆ, ನಾನಾರೀತಿಯದ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಸಿದ್ಧವಾಗಿರುವುದು ಕಾರ್ಯ ಕರ್ತರು (ಸ್ವಯಂಸೇವಕರು ಮತ್ತು ವೇತನ ಪಡೆಯುವ ಸಿಬ್ಬಂದಿ ಸೇರಿದಂತೆ) ಇಷ್ಟಬಂದಂತೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬಹುದು ಎಂಬುದು ಇದರ ಅರ್ಥವಲ್ಲ. ಅವರು ಕೈಗೊಳ್ಳುವ ಜವಾಬ್ದಾರಿಗಳಲ್ಲಿ ಒಂದು ಕ್ರಮವಿದೆ, ಒಂದು ನಮೂನೆ ಮತ್ತು ನಿರ್ದಿಷ್ಟತೆಯಿದೆ; ಮಾಡಬೇಕಾಗಿರುವುದು ಅದು ಏನೇ ಆಗಿದ್ದರೂ ಅದನ್ನು ಮಾಡಲು ಮಾನಸಿಕ ಸಿದ್ಧತೆ ಇರಬೇಕಷ್ಟೇ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಗುರುತಿಸಿ ಸ್ಪಷ್ಟವಾಗಿ ವಿಶದಪಡಿಸಿದ್ದರೂ ಗೆರೆ ಎಳೆದಂತೆ ಕಠಿಣವಾಗಿ ಅವುಗಳನ್ನು ವಿಂಗಡಿಸುವುದು ಈ ಕಾರ್ಯಕ್ರಮದ ಉದ್ದೇಶವಲ್ಲ.

ಇಂಥ ಕಾರ್ಯಕ್ರಮವನ್ನು ನಿಭಾಯಿಸಲು ಪರಿಗಣಿಸಬೇಕಾದ ಒಂದು ಬಹುಮುಖ್ಯ ವಿಷಯವೆಂದರೆ ಅದು ಕಾರ್ಯ ಕರ್ತೆಯರ ತರಬೇತಿಯಾಗಿದೆ. ಮುಂದಿನ ಉಪವಿಭಾಗವನ್ನು ಸಂಚಾರಿ ಶಿಶು ಕೇಂದ್ರಗಳು ಅದರ ಸಿಬ್ಬಂದಿಗೆ ನೀಡುವ ತರಬೇತಿಯ ವಿವರಣೆಗೆಂದು ಮೀಸಲಿಡಲಾಗಿದೆ.

### 20.6.3 ಸಿಬ್ಬಂದಿ ತರಬೇತಿ

ಯಾವುದೇ ಶಿಶುಪಾಲನೆಯ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಇರಬೇಕೆಂದರೆ ಆರೈಕೆದಾರರು ಮತ್ತು ಮಕ್ಕಳ ಅನುಪಾತಕ್ಕೆ ಆದ್ಯತೆ ನೀಡುವುದರೊಂದಿಗೆ ಸಾಮರ್ಥ್ಯ ಮತ್ತು ಕೌಶಲಗಳಿಂದ ಕೂಡಿದ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಗಳನ್ನು ಒಳಗೊಂಡಿರಬೇಕಾಗುತ್ತದೆ. ಆರೈಕೆದಾರರು ಮಗುವಿನ ಸಾಂಸ್ಕೃತಿಕ ಹಿನ್ನೆಲೆಯನ್ನು ಹಂಚಿಕೊಂಡಿದ್ದರೆ ಇಬ್ಬರಿಗೂ ಪರಸ್ಪರ ಹತ್ತಿರವಾಗಲು ಸುಲಭವಾಗುತ್ತದೆ. ಆಗ ಕಡಮೆ ಸಾಮಾಜಿಕ

ಅಂತರವಿರುತ್ತದೆ ಮತ್ತು ಆರೈಕೆದಾರರು ಸಹಜವಾಗಿ, ಸರಳವಾಗಿ ಮಕ್ಕಳನ್ನು ಆರೈಕೆ ಮಾಡಲು, ಅವರಿಗೆ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತದೆ. ಆದಾಗ್ಯೂ, ಇದೊಂದು ಕಠಿಣ ನಿಯಮವಾಗೇನೂ ಇರಬೇಕಾಗಿಲ್ಲ. ಹೊಂದಾಣಿಕೆಗಳನ್ನು ಮಾಡಕೊಳ್ಳಲು ಸಾಧ್ಯ ಮತ್ತು ಮಾಡಿಕೊಳ್ಳಲಾಗುತ್ತಿದೆ ಕೂಡ. *"ಅಂತಿಮವಾಗಿ ಮಕ್ಕಳಿಗೆ ಸಿಗುವ ಗುಣಾತ್ಮಕ ಆರೈಕೆಯು ಅವರನ್ನು ನೋಡಿಕೊಳ್ಳುವ ವ್ಯಕ್ತಿಗಳನ್ನು ಆಧರಿಸಿರುತ್ತದೆ".*

ಮಾದರಿ ವ್ಯಕ್ತಿಯು ಮಕ್ಕಳನ್ನು ನೋಡಿಕೊಳ್ಳಲು ಬಹುಮುಖಿಯ ಕೌಶಲಗಳನ್ನು ಹೊಂದಿರಬೇಕು. ಅಂದರೆ, ಮಕ್ಕಳನ್ನು ಪೋಷಿಸುವುದು, ಅವರ ದೈಹಿಕ ವಿಷಯಗಳಿಗೆ ಸಂಬಂಧಿಸಿದಂತೆ ಕಾಳಜಿ ವಹಿಸುವುದು, ಉತ್ತೇಜಕ ಚಟುವಟಿಕೆಗಳನ್ನು ಆಯೋಜಿಸುವುದು, ಪೌಷ್ಟಿಕಾಂಶ ಮತ್ತು ಆರೋಗ್ಯದ ಬಗ್ಗೆ ಕಾಳಜಿ ಹೊಂದುವುದು ಮುಂತಾದ ಕೌಶಲಗಳು. ಆಕೆಯು ಆತ್ಮಾಭಿಮಾನ ಮತ್ತು ವಿಶ್ಲೇಷಣಾತ್ಮಕ ಕೌಶಲಗಳನ್ನು ಹೊಂದಿರುವುದರ ಜೊತೆಗೆ ಆತ್ಮವಿಶ್ವಾಸದಿಂದ ಕೂಡಿದ ವ್ಯಕ್ತಿಯಾಗಿರಬೇಕು. ಇವು ಆಕೆಗೆ ತುರ್ತು ಸಂದರ್ಭಗಳು ಮತ್ತು ಸಮಸ್ಯೆಗಳು ಎದುರಾದಾಗ ಅವುಗಳನ್ನು ನಿಭಾಯಿಸಲು ಸಹಾಯ ಮಾಡುತ್ತವೆ. ಅದರೊಂದಿಗೆ ಆಕೆಯು ನಿಸ್ಸಂದಿಗ್ಧವಾಗಿ ಪ್ರಾಮಾಣಿಕ, ನ್ಯಾಯಪರತೆಯುಳ್ಳ ವ್ಯಕ್ತಿಯಾಗಿದ್ದು, ಅವಳ ಆರೈಕೆಯಲ್ಲಿರುವ ಮಕ್ಕಳ ಪೋಷಕರು ಅವರ ಮೇಲೆ ಇಟ್ಟ ನಂಬಿಕೆ ವಿಶ್ವಾಸ ಉಳಿಸಿಕೊಳ್ಳಬೇಕು.

ಆದ್ದರಿಂದ, ಗುಣಾತ್ಮಕ ಶಿಶುಪಾಲನೆಯ ತರಬೇತಿಯಲ್ಲಿ, ಮಕ್ಕಳ ಆರೈಕೆ ಮಾಡುವ ಕಾರ್ಯ ಕರ್ತೆಯರ ವೈಯಕ್ತಿಕ ಬೆಳವಣಿಗೆಯು, ಜ್ಞಾನಬೋಧನೆ ಮತ್ತು ಕೌಶಲಗಳನ್ನು ಕಲಿಸುವ ವಿಧಾನಗಳಷ್ಟೇ ಮುಖ್ಯವಾಗಿರುತ್ತದೆ. ಮಕ್ಕಳನ್ನು ನೋಡಿಕೊಳ್ಳುವವರು ಶಿಸ್ತಿಲ್ಲದ, ಆತ್ಮವಿಶ್ವಾಸವಿಲ್ಲದ, ಜೀವನದಲ್ಲಿ ನಿರಾಶೆಗೊಂಡ ವ್ಯಕ್ತಿಗಳಾಗಿದ್ದರೆ ಅಂತಹವರು ಮಗುವಿಗೆ ಒಳ್ಳೆಯ ವಾತಾವರಣ ಒದಗಿಸುತ್ತಾರೆ ಎಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಸಮಗ್ರವಾದ ಶಿಶುಪಾಲನೆಯು ಬದಲಾದ ಅವಶ್ಯಕತೆಗಳು ಮತ್ತು ಬೇಡಿಕೆಗಳಿಂದಾಗಿ ದೈಹಿಕ ಆರೈಕೆ ಮತ್ತು ಶಿಕ್ಷಣದಾಚೆಗಿನ ಆಯಾಮವನ್ನು ತೆಗೆದುಕೊಂಡಿದೆ. ನೀವು ಓದಿದಂತೆ, ಸೂಕ್ತ ಮಗುವಿನ ಆರೈಕೆಯು ಮಗುವಿನ ಸಮಗ್ರ ರೀತಿಯದ ಬೆಳವಣಿಗೆಯನ್ನು ಮತ್ತು ಪೋಷಕರು, ಅಧಿಕಾರ

ಹೊಂದಿದವರು ಮತ್ತು ಸಹೋದ್ಯೋಗಿಗಳಂತಹ "ಜನರನ್ನು ನಿಭಾಯಿಸುವುದನ್ನು" ಒಳಗೊಂಡಿದೆ. ಅದಲ್ಲದೆ, ವಿಶೇಷವಾಗಿ ಮಗುವಿನ ಬೆಳವಣಿಗೆಗೆ ಸಂಬಂಧಿಸಿದಂತೆ ಸಂಸ್ಥೆಯ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವುದನ್ನು ಸಹ ಒಳಗೊಂಡಿದೆ.

ಸಂಚಾರಿ ಶಿಶು ಕೇಂದ್ರಗಳ ಸಿಬ್ಬಂದಿಯು ಸಾಮಾನ್ಯವಾಗಿ ಸಮಾಜದ ಕೆಳ ಮಧ್ಯಮ ಸಮಾಜೋ ಆರ್ಥಿಕ ಸ್ತರದಿಂದ ಬಂದವರಾಗಿರುತ್ತಾರೆ. ಅವರು ಸಾಮಾನ್ಯವಾಗಿ ಮಕ್ಕಳೊಡನೆ ಕೆಲಸ ಮಾಡಲು ಆಸಕ್ತಿ ಹೊಂದಿರುವ ಯುವ ಗೃಹಿಣಿಯರು, ಅಥವಾ ಕುಟುಂಬವನ್ನು ಆರ್ಥಿಕವಾಗಿ ಬೆಂಬಲಿಸಲು ಗೌರವಯುತವಾದ ವೃತ್ತಿಯನ್ನು ಅರಸುತ್ತಿರುವ ಯುವತಿಯರಾಗಿರುತ್ತಾರೆ.

ಸಂಚಾರಿ ಶಿಶು ಕೇಂದ್ರಗಳು ಒಂದು ಸಂಸ್ಥೆಯಾಗಿ ಪ್ರಾರಂಭವಾದಾಗ, ಮಕ್ಕಳ ಆರೈಕೆ ಮಾಡಲು ಮುಂದೆ ಬಂದ ಮಹಿಳೆಯರು ಬಹುತೇಕ ಅವರ ಮಕ್ಕಳು ಈಗಾಗಲೇ ಬೆಳೆದು ದೊಡ್ಡವರಾಗಿದ್ದ ಹಿರಿಯ ಮಹಿಳೆಯರಾಗಿದ್ದರು. ಆರಂಭದಲ್ಲಿ ನೋಡಿಕೊಳ್ಳುವವರು ಯಾರು ಇಲ್ಲದ ಮಕ್ಕಳಿಗೆ ರಕ್ಷಣೆ ಒದಗಿಸುವ ಉದ್ದೇಶ ಮಾತ್ರವಿದ್ದದ್ದರಿಂದ ಕೆಲಸ ಮಾಡಲು ಇಚ್ಛಿಸುವ ಮತ್ತು ತಾಯಿ ಸಹಜ ಭಾವನೆಗಳನ್ನು ಹೊಂದಿರುವ ಮಹಿಳೆಯರನ್ನು ನೇಮಿಸಲಾಯಿತು. ಶಿಶುಗಳಿಗೆ ಮೂಲಭೂತ ಅಗತ್ಯಗಳನ್ನು ಒದಗಿಸುವುದು ಒಂದು ಸಹಜ ವಿಷಯವಾಗುತ್ತಿದ್ದಂತೆ, ಮಕ್ಕಳನ್ನು ನೋಡಿಕೊಳ್ಳುತ್ತಿರುವ ವಯಸ್ಕರು ಮಕ್ಕಳ ಕಲಿಕೆಗೆ ಸೂಕ್ತವೆನಿಸುವ ವಯೋ-ಸಂಬಂಧಿತ ಚಟುವಟಿಕೆಗಳು, ವಯೋ-ಸಂಬಂಧಿತ ಆಹಾರ ಮತ್ತು ಅದನ್ನು ಕೊಡುವ ರೀತಿ, ನಿರೋಧಕ ಮತ್ತು ಪರಿಹಾರಿಕ ಆರೋಗ್ಯ ಸಂಬಂಧಿತ ಕಾರ್ಯರೀತಿ ಇತ್ಯಾದಿ ಮಕ್ಕಳನ್ನು ಬೆಳೆಸುವ ನಿರ್ದಿಷ್ಟ ಕೌಶಲಗಳನ್ನು ಹೊಂದಿರಬೇಕೆಂಬುದು ಸ್ಪಷ್ಟವಾಗತೊಡಗಿತು. ಆದ್ದರಿಂದ, ಆರೈಕೆ ಮತ್ತು ಪೋಷಿಸುವುದಕ್ಕೆ ಇನ್ನೂ ಪ್ರಾಮುಖ್ಯತೆ ಕೊಡುತ್ತಿದ್ದರೂ, ಇನ್ನು ಉತ್ತಮವಾದ ಸೇವೆಗಳನ್ನು ತಲುಪಿಸಲು ಮಹಿಳೆಯರಿಗೆ ತರಬೇತಿ ಅಗತ್ಯತೆ ಇರುವುದನ್ನು ಗುರುತಿಸಿದರು ಮತ್ತು ಕೆಲವು ಯುವತಿಯರನ್ನು ನೇಮಿಸಿಕೊಳ್ಳಲಾಯಿತು.

ಮಕ್ಕಳನ್ನು ನೋಡಿಕೊಳ್ಳುವ ಕಾರ್ಯ ಕರ್ತರು ಉತ್ತಮ ಮತ್ತು ಉಪಯೋಗವುಳ್ಳಂತಹ ಸಾಂಪ್ರದಾಯಿಕ ಕಾರ್ಯರೀತಿಗಳನ್ನು ಉಳಿಸಿಕೊಳ್ಳುವುದರೊಂದಿಗೆ ಅಷ್ಟೇ ಹಾನಿಕರ ಕಾರ್ಯರೀತಿಗಳನ್ನು ಕೈಬಿಡುವ ಧೈರ್ಯ ಹೊಂದಿರಬೇಕಾಗಿರುವುದು ಮುಖ್ಯ. ಅವರೇ ಸ್ವತಃ

ಸಾಂಪ್ರದಾಯಿಕ ರೀತಿನೀತಿಗಳನ್ನು ಕೈಬಿಟ್ಟು ಆಧುನಿಕ "ವೈಜ್ಞಾನಿಕ" ರೀತಿನೀತಿಗಳನ್ನು ಅಳವಡಿಸಿಕೊಳ್ಳಬೇಕು; ಅಥವಾ ಕೊನೇಪಕ್ಷ "ವೃತ್ತಿಪರತೆ" ವಿಧಾನಗಳ ಹೆಸರಿನಲ್ಲಿ ಹೊಸ ರೀತಿನೀತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಈ ಎಲ್ಲಾ ಸವಾಲುಗಳನ್ನು ಮಕ್ಕಳನ್ನು ನೋಡಿಕೊಳ್ಳುವ ಸಂಚಾರಿ ಶಿಶು ಕೇಂದ್ರಗಳ ಸಿಬ್ಬಂದಿ ಎದುರಿಸಬೇಕಾಗುತ್ತದೆ. ಎಷ್ಟೋ ತಲೆಮಾರುಗಳಿಂದ ಸಮಾಜದಲ್ಲಿ ತಮಗಿದ್ದ ಅಮುಖ್ಯ ಪಾತ್ರವನ್ನು ಪ್ರತಿರೋಧಿಸದೆ ಒಪ್ಪಿಕೊಂಡಿರುವುದು ಆದರ್ಶನೀಯ ಪತ್ನಿ ಎಂಬ ಮಾದರಿಯಾಗಿ ವಿಕಸನಗೊಂಡಿರುವುದನ್ನು ಅವರು ಅಂತರ್ಗತಗೊಳಿಸಿಕೊಂಡಿದ್ದಾರೆ. ಈ ಮಹಿಳೆಯರು, ನಿರ್ಧಾರವನ್ನು ತೆಗೆದುಕೊಳ್ಳಲು ಅಥವಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ಹಿಂದಿನ ಅನುಭವ ಹೊಂದಿರುವುದಿಲ್ಲ, ಮತ್ತು ಸಾಮಾನ್ಯವಾಗಿ ತಮ್ಮ ಮನೆಯಲ್ಲಿ ನಾಯಕತ್ವದ ಗುಣಗಳನ್ನು ವ್ಯಕ್ತಪಡಿಸುವುದಿಲ್ಲ. ಆದರೂ, ತಮ್ಮ ಕೆಲಸದ ಸ್ಥಳದಲ್ಲಿ ಅವರು ಹಲವಾರು ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕು ಎಂಬ ನಿರೀಕ್ಷೆ ಇರುತ್ತದೆ.

ಅವರು ಇತರರೊಡನೆ ಕೆಲಸ ಮಾಡುವುದನ್ನು ಮತ್ತು ಉಳಿದ ತಂಡದೊಂದಿಗೆ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದನ್ನು ಕಲಿಯಬೇಕಾಗುತ್ತದೆ. ಅವರು ಗುಂಪು ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು, ಮತ್ತು ಅಗತ್ಯಬಿದ್ದರೆ ಅವರ ಮೇಲಧಿಕಾರಿಗಳನ್ನು ಪ್ರಶ್ನಿಸುವುದನ್ನು ಕಲಿಯಬೇಕಾಗುತ್ತದೆ.

ಆದ್ದರಿಂದ, ವೈಯಕ್ತಿಕ ವ್ಯಕ್ತಿತ್ವ ಬೆಳವಣಿಗೆ ಬಹಳ ಅತ್ಯಗತ್ಯ. ಅವರು ಸ್ನೇಹಪರತೆ ಮತ್ತು ಸ್ನೇಹವನ್ನು ದುರುಪಯೋಗಪಡಿಸಿಕೊಳ್ಳುವ ರೀತಿಯ ನಡುವೆ; ವಿಮರ್ಶನಶೀಲ ಮತ್ತು ಪ್ರತಿಕಾರಕ ಮೌಲ್ಯಮಾಪನದ ನಡುವೆ; ಕೆಲಸದಲ್ಲಿ ವಸ್ತುನಿಷ್ಠತೆ ಮತ್ತು ಉದಾಸೀನತೆಯ ನಡುವೆ ವ್ಯತ್ಯಾಸವಿದೆ ಎಂಬುದನ್ನು ಅರ್ಥಮಾಡಿಕೊಂಡು ಗುರುತಿಸುವುದನ್ನು ಕಲಿಯಬೇಕು. ಈ ಗುಣಗಳು ಅಗೋಚರವಾಗಿದ್ದು, ವ್ಯವಸ್ಥಿತವಾಗಿ ಅರಿವು ಮೂಡಿಸುವುದರ ಮೂಲಕವೇ ಅವುಗಳನ್ನು ಬೆಳಸಿಕೊಳ್ಳಲು ಸಾಧ್ಯ.

ಇದನ್ನು ಸಾಧಿಸಲು ಸಂಸ್ಥೆಯು, ಎಲ್ಲಾ ಸದಸ್ಯರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವಂತೆ ಮತ್ತು ಸಾಮೂಹಿಕವಾಗಿ

ತೆಗೆದುಕೊಂಡ ನಿರ್ಧಾರಗಳಿಗೆ ಜವಾಬ್ದಾರರಾಗುವಂತೆ ಪ್ರೋತ್ಸಾಹಿಸುವ ಸಲುವಾಗಿ ಆಗಾಗ್ಗೆ ಸದಸ್ಯರಲ್ಲಿ ಚರ್ಚೆಗಳನ್ನು ಒಳಗೊಳ್ಳುವ ಸಭೆಗಳು ಮತ್ತು ಕಾರ್ಯಗಾರಗಳಂತಹ ವ್ಯವಸ್ಥೆಗಳನ್ನು ರೂಪಿಸಿದೆ. ಸಭೆಯ ಉದ್ದೇಶಕ್ಕೆ ಅನುಗುಣವಾಗಿ ಗುಂಪುಗಳನ್ನು ಯೋಜಿಸಲಾಗುತ್ತದೆ. ಹೀಗೆ ಮೇಲ್ವಿಚಾರಕರು ವಿಷಯಗಳನ್ನು ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುವ ಸಮಾನ ಅಧಿಕಾರ ಹೊಂದಿರುವ ಗುಂಪುಗಳಿವೆ. ಹಾಗೆಯೇ ನಿಯತವಾಗಿ ಸಭೆ ಸೇರುವ, ಕೇಂದ್ರಗಳ ಗುಂಪುಗಳನ್ನು ಒಳಗೊಂಡಿರುವ, ಒಂದು ಕೇಂದ್ರ ಅಥವಾ ವಲಯದಲ್ಲಿ ಕೆಲಸಮಾಡುತ್ತಿರುವ ವಿವಿಧ ಮಟ್ಟಗಳ ಎಲ್ಲಾ ಸಿಬ್ಬಂದಿ ಸದಸ್ಯರುಗಳನ್ನು ಒಳಗೊಂಡ ಶ್ರೇಣೀಕೃತ ಗುಂಪುಗಳು ಸಹ ಇವೆ.

ಈ ಔಪಚಾರಿಕ ಮತ್ತು ವ್ಯವಸ್ಥಿತವಾದ ಸಭೆಗಳಲ್ಲದೆ, ಇನ್ನೂ ಅನೇಕ ಅನೌಪಚಾರಿಕ ಸಭೆಗಳು ನಡೆಯಲು ಅವಕಾಶಗಳಿವೆ. ಉದಾಹರಣೆಗೆ, ಮಧ್ಯಾನ್ಹದ ಊಟದ ಸಮಯದಲ್ಲಿ ಎಲ್ಲಾ ಸಿಬ್ಬಂದಿ ಸದಸ್ಯರು ಒಟ್ಟಿಗೆ ಸೇರುತ್ತಾರೆ, ಊಟವನ್ನಷ್ಟೇ ಅಲ್ಲದೆ ತಮ್ಮ ಕೆಲಸ ಸ್ಥಳ ಮತ್ತು ಮನೆಯಲ್ಲಿನ ಸಮಾಚಾರಗಳನ್ನೂ ಹಂಚಿಕೊಳ್ಳುತ್ತಾರೆ.

ಚರ್ಚೆಗೆ ಮತ್ತು ನಿರ್ಧಾರ ತೆಗೆದುಕೊಳ್ಳಬೇಕಾದ ವಿಷಯಗಳು, ಆಹಾರ ಸಂಗ್ರಹಣೆ, ಬೋಧನಾ ಸಾಮಗ್ರಿಗಳು ಮತ್ತು ಇತರ ಉಪಕರಣಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಸಮಸ್ಯೆಗಳು; ರಜಾ ನಿಯಮಗಳು, ನೇಮಕಾತಿಗಳು, ನಿಯತವಾಗಿ ಖಾಲಿ ಹುದ್ದೆಗೆ ಜಾಹೀರಾತು, ಮೌಲ್ಯಮಾಪನ ಮತ್ತು ಬಡ್ತಿಗಳಂತಹ ಸಿಬ್ಬಂದಿ ಸಂಬಂಧಿತ ಸಮಸ್ಯೆಗಳಾಗಿರುತ್ತವೆ. ಅದರೊಂದಿಗೆ ಮಹಿಳಾ ಹಕ್ಕುಗಳ ವಿಷಯಗಳು, ಕುಟುಂಬದೊಳಗೆ ಮತ್ತು ಸಮಾಜದಲ್ಲಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಅವರ ಪಾತ್ರ ಇತ್ಯಾದಿ ಕೆಲವು ಗಂಭೀರ ವಿಷಯಗಳ ಬಗ್ಗೆ ಪರ್ಯಾಲೋಚಿಸಲು ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ. ನಟನೆಯ ಆಟಗಳು, ನಾಟಕ, ಸಂಗೀತವನ್ನು ಒಳಗೊಳ್ಳುವ ಆಟಗಳು, ಪಿಕ್ನಿಕ್ ಮತ್ತು ಶಿಬಿರಗಳಂತಹ ಬಹು-ಇಂದ್ರಿಯಸಂವೇದನೆಯ ಅನುಭವಗಳನ್ನು ನೀಡುವುದರ ಮೂಲಕ ಅವರ ಅರಿವನ್ನು ಹೆಚ್ಚಿಸಲಾಗುತ್ತದೆ. ಅದಲ್ಲದೆ ಈ ಚಟುವಟಿಕೆಗಳು ತಾವೂ ಸಂಸ್ಥೆಗೆ ಸೇರಿದವರೆಂಬ ಭಾವನೆಯನ್ನು ತರುತ್ತವೆ.

ಮಕ್ಕಳ ಆರೈಕೆ ಬಗ್ಗೆ ಸೈದ್ಧಾಂತಿಕ ತಿಳಿವಳಿಕೆಯನ್ನು ಕೇಂದ್ರೀಯವಾಗಿ ನಡೆಯುವ ನಿಯತ ಕಾರ್ಯಾಗಾರಗಳ ಮೂಲಕ ನೀಡಲಾಗಿದ್ದು ಅವು

ಬೋಧನಾ ವಿಧಾನ ಮತ್ತು ವಿಷಯವಸ್ತು, ಆರೋಗ್ಯದ ಬಗ್ಗೆ ಶಿಕ್ಷಣ ಮತ್ತು ಸೃಜನಶೀಲ ಕಲೆಗಳಿಗೆ ತರಬೇತಿ ನೀಡುವುದಕ್ಕೆ ಸಂಬಂಧಿಸಿದಂತದ್ದಾಗಿರುತ್ತವೆ.

ಹಲವು ವರ್ಷಗಳಿಂದ, ಸಂಚಾರಿ ಶಿಶು ಕೇಂದ್ರಗಳ ತರಬೇತಿಯನ್ನು ಪ್ರಮಾಣೀಕರಿಸಲಾಗಿದೆ ಮತ್ತು ಹೊಂದಿರಬೇಕಾದ ಕನಿಷ್ಠ ವಿದ್ಯಾರ್ಹತೆಯನ್ನು 10ನೇ ತರಗತಿಗೆ ನಿಗದಿಪಡಿಸಿದೆ. ಏಕೆಂದರೆ, ಸಿಬ್ಬಂದಿಯು ಅಗತ್ಯ ಬಿದ್ದಾಗಲೆಲ್ಲಾ ಮಾಹಿತಿಗಳನ್ನು ಉಲ್ಲೇಖಿಸುವ ಸಾಧ್ಯತೆ ಇರಲು ಅವರು ಎಲ್ಲವನ್ನು ಬರೆದಿಡುವ ಸಾಮರ್ಥ್ಯವನ್ನು ಹೊಂದಿರಬೇಕಾದ ಅಗತ್ಯವಿತ್ತು. ಇದು ಬಹಳ ಮುಖ್ಯವೆಂದು, ಅದರಲ್ಲೂ ವಿಶೇಷವಾಗಿ ಆರೋಗ್ಯ ಶಿಕ್ಷಣಕ್ಕೆ ಮುಖ್ಯವೆಂದು ಕಂಡುಕೊಂಡರು.

ಸಿಬ್ಬಂದಿಗೆ ನೀಡಲಾಗುವ ತರಬೇತಿಯು ಕಾರ್ಯಕ್ರಮದಲ್ಲಿ ಅನುಭವಿಗಳಾದ ಹಿರಿಯ ಸಿಬ್ಬಂದಿಗಳಿಂದ ಕೈಗೊಳ್ಳಲಾಗುತ್ತದೆ. ಅವರ ನೆರವಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ವೈದ್ಯರು, ಶಿಕ್ಷಕರು ಮತ್ತು ಸಮಾಜ ಸೇವೆಯಲ್ಲಿ ಪದವಿಪಡೆದಂತಹ ಸಂಪನ್ಮೂಲ ವ್ಯಕ್ತಿಗಳಿರುತ್ತಾರೆ. ಅಗತ್ಯವಿದ್ದಾಗ ವಕೀಲರು, ನಿರ್ವಹಣಾ ಪರಿಣಿತಿ ಉಳ್ಳವರು ಅಥವಾ ನಿಧಿ ಸಂಗ್ರಹಕಾರರಂತಹ ನಿರ್ದಿಷ್ಟ ಸಂಪನ್ಮೂಲ ವ್ಯಕ್ತಿಗಳನ್ನು ಕಾರ್ಯಾಗಾರ ಅಥವಾ ಸಭೆಗಳನ್ನು ನಡೆಸಲು ಆಹ್ವಾನಿಸಲಾಗುತ್ತದೆ.

ಶಿಶುಪಾಲನಾ ಕಾರ್ಯ ಕರ್ತರನ್ನು ಆಗಾಗ್ಗೆ ಮಕ್ಕಳೊಡನೆ ಕೆಲಸ ಮಾಡುವ ಇತರ ಸಂಸ್ಥೆಗಳಲ್ಲಿನ ಕಾರ್ಯವಿಧಾನಗಳನ್ನು ಗಮನಿಸಲು ಮತ್ತು ಕಲಿಯಲು, ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಈ ರೀತಿಯ ಅಂತರಕ್ರಿಯೆಗಳು ಅವರಿಗೆ ಅವರು ಮಾಡುತ್ತಿರುವ ಕೆಲಸವನ್ನು ಅರ್ಥಮಾಡಿಕೊಳ್ಳಲು ನೆರವಾಗುವುದಲ್ಲದೆ ಜಾಲಾಬಂಧಗಳನ್ನು ಕಟ್ಟಿಕೊಳ್ಳಲೂ ಸಹ ನೆರವಾಗುತ್ತದೆ.

ಸೈದ್ಧಾಂತಿಕ ವಿಚಾರಗಳನ್ನು ತಿಳಿಸುವ ಕಾರ್ಯಾಗಾರಗಳಲ್ಲಿ, ಕಾರ್ಯಕ್ರಮವನ್ನು ಹೆಚ್ಚು ಸಂಪತ್ಭರಿತವಾಗಿಸಲು, ಅವರಿಗೆ ಅರಿವು ಮೂಡಿಸುವಂಥ ಸಿನಿಮಾಗಳನ್ನು ತೋರಿಸಲಾಗುತ್ತದೆ ಮತ್ತು ಇತರ ಸಂಪನ್ಮೂಲ ಪರಿಕರಗಳು ಮತ್ತು ವಿಶೇಷ ಪರಿಣಿತರಿಗೂ ಸಹ ಪರಿಚಯಿಸಲಾಗುತ್ತದೆ.

ತರಬೇತಿಯ ಉದ್ದೇಶಗಳು ಹೀಗಿವೆ:

- ಶಿಶುಪಾಲನಾ ಕಾರ್ಯ ಕರ್ತರು ಪಠ್ಯಕ್ರಮವನ್ನು ಮತ್ತು ಕಾರ್ಯಾಗಾರದ ವಿಷಯದ ಹಿಂದಿರುವ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಬೋಧಿಸುವಾಗ ಅವರ ಸಮಾಜೋ ಸಾಂಸ್ಕೃತಿಕ ಹಿನ್ನೆಲೆ ಮತ್ತು ಸಂದರ್ಭವನ್ನು ಗಮನದಲ್ಲಿಟ್ಟುಕೊಂಡಿರಬೇಕಾಗುತ್ತದೆ. ಉದಾಹರಣೆಗೆ, ಬಳಸುವ ಪದಗಳು ಅಥವಾ ಕೊಡುವ ನಿದರ್ಶನಗಳು ಮಕ್ಕಳಿಗೆ ಪರಿಚಿತದ್ದಾಗಿರಬೇಕು.
- ಕಾರ್ಯ ಕರ್ತರು ಎಲ್ಲಾ ವಯಸ್ಸಿನ ಮಕ್ಕಳೊಡನೆ ಕೆಲಸ ಮಾಡುವುದನ್ನು ಮತ್ತು ಪೋಷಕರು ಹಾಗೂ ಕುಟುಂಬದ ಇತರ ಸದಸ್ಯರೊಡನೆ ಕೆಲಸ ಮಾಡುವುದನ್ನು ಕಲಿಯಬೇಕಾಗುತ್ತದೆ.
- ಕಾರ್ಯ ಕರ್ತರು ಒಂದು ತಂಡದ ಭಾಗವಾಗಿ ಕೆಲಸ ಮಾಡುವ ಕೌಶಲಗಳನ್ನು ಮತ್ತು ವಿವಿಧ ಹಿನ್ನೆಲೆಯ ವ್ಯಕ್ತಿಗಳೊಡನೆ ಸಹಕಾರ ಮನೋಭಾವದಿಂದ ಕೆಲಸ ಮಾಡುವುದನ್ನು ಕಲಿಯಬೇಕು.
- ಕಾರ್ಯ ಕರ್ತರು ಹಣಕಾಸು ಸಂಪನ್ಮೂಲಗಳನ್ನು ಮತ್ತು ಸಮಯ ನಿರ್ವಹಣೆ ಮಾಡುವುದನ್ನು ಕಲಿಯಬೇಕು.

ಸಂಚಾರಿ ಶಿಶು ಕೇಂದ್ರಗಳು ಉತ್ತಮ ಗುಣಮಟ್ಟದ ಒಂದು ECCE ಕಾರ್ಯಕ್ರಮವು ಅನೇಕ ಘಟಕಗಳನ್ನು ಹೊಂದಿರಬೇಕೆಂದು ಗುರುತಿಸುತ್ತದೆ. ಅವುಗಳಲ್ಲಿ ಬಹು ಮುಖ್ಯವಾದವು ಈ ಕೆಳಗಿನಂತಿವೆ:

- ಬೆಳವಣಿಗೆಗೆ ಸೂಕ್ತ ಪಠ್ಯಕ್ರಮ
- ಮೇಲ್ವಿಚಾರಣೆ ಮಾಡಲು ಬೆಂಬಲ ಮತ್ತು ವೃತ್ತಿನಿರತರಾಗಿರುವಾಗಲೇ ತರಬೇತಿ
- ಅತ್ಯಂತ ಅನುಕೂಲಕರವಾದ ವಯಸ್ಕ-ಮಗು ಅನುಪಾತ
- ಮಗುವಿನ ಸಾಮಾಜೋ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸೂಕ್ಷ್ಮತೆ ಹೊಂದಿರುವುದು
- ಮಗುವಿನ ಬೆಳವಣಿಗೆಯಲ್ಲಿ ಪೋಷಕರ ಮತ್ತು ಕುಟುಂಬದ ಇತರ ಸದಸ್ಯರನ್ನು ತೊಡಗಿಸಿಕೊಳ್ಳುವುದು
- ಕಾರ್ಯಕ್ರಮವನ್ನು ಮೌಲ್ಯಮಾಪನ ಮತ್ತು ಪುನರ್ವಿನ್ಯಾಸ ಮಾಡಲೆಂದು ಸಹಾಯ ಮಾಡಲು ನಿರಂತರ ಉಸ್ತುವಾರಿ ಮಾಡುವುದು ಮತ್ತು ಪ್ರತಿಕ್ರಿಯೆಗಳನ್ನು ಪಡೆಯುವುದು ಅಗತ್ಯ

- ಶಿಶುಪಾಲನಾ ಕಾರ್ಯ ಕರ್ತರು ತಾವು ನಿರೀಕ್ಷಿಸಿದ ರೀತಿಯಲ್ಲಿ ನಿಯಮಗಳನ್ನು ಪಾಲಿಸುತ್ತಿರುವರೇ ಎಂದು ಸ್ವತಃ ತಾವೇ ವಿಮರ್ಶನಶೀಲ ಮೌಲ್ಯಮಾಪನ ಮಾಡಿಕೊಳ್ಳಬೇಕು

ಸಂಚಾರಿ ಶಿಶು ಕೇಂದ್ರಗಳಲ್ಲಿ, ಎಲ್ಲಾ ಮಟ್ಟದಲ್ಲಿನ ಕಾರ್ಯ ಕರ್ತರ ತರಬೇತಿಯು ಕೆಲಸದ ಮೇಲಿನ ಅನುಭವದ ಮೂಲಕ ನಡೆಯುವುದರಿಂದ ಶೇಕಡ 80% ಸಮಯವು ಮಕ್ಕಳೊಡನೆ ಕ್ಷೇತ್ರದಲ್ಲಿಯೇ ಕಳೆಯುವುದಾಗುತ್ತದೆ ಮತ್ತು ಶೇಕಡ 20% ಸಮಯವು ಕಾರ್ಯಾಗಾರಗಳಲ್ಲಿ ಸೈದ್ಧಾಂತಿಕ ತಿಳಿವಳಿಕೆ ನೀಡವುದಕ್ಕೆಂದು ಮೀಸಲಾಗಿರುತ್ತದೆ. ಪ್ರತಿ ಶಿಶುಪಾಲನಾ ಕಾರ್ಯ ಕರ್ತರಿಗೂ ಶಿಶು-ಸಂಬಂಧಿತ ವಿಷಯಗಳಲ್ಲಿ - ಅಂದರೆ ದಿನ-ಆರೈಕೆ, ಆರಂಭಿಕ ಬಾಲ್ಯ ಶಿಕ್ಷಣ, ಮಕ್ಕಳ ಬೆಳವಣಿಗೆ, ಮಕ್ಕಳ ಮನೋವಿಜ್ಞಾನ ಮತ್ತು ಸದಾ ಸೃಜನಶೀಲವಾಗಿರಲು ಪ್ರೋತ್ಸಾಹ ಮಾಡುವುದು = ತರಬೇತಿಯು ಸತತವಾಗಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ.

ತರಬೇತಿ ಪಡೆಯುವವರಿಗೆ, ಯಾರು ಸಂಸ್ಥೆಯ ಸಿಬ್ಬಂದಿಗಳಲ್ಲವೋ ಅವರಿಗೆ ತರಬೇತಿ ಭತ್ಯೆ ನೀಡಲಾಗುತ್ತದೆ. ಇದನ್ನು ಕೆಳ ಮಟ್ಟದ ಸಮಾಜೋ ಆರ್ಥಿಕ ಸ್ತರದಿಂದ ಬರುವಂತಹ ಕಾರ್ಯ ಕರ್ತರನ್ನು ಆಕರ್ಷಿಸಲೆಂದು ನೀಡಲಾಗುತ್ತದೆ; ಅವರು ತಮ್ಮ ಜೀವನ ಸಾಗಿಸಲು ವೃತ್ತಿಯೊಂದನ್ನು ಹೊಂದಲು ಸಜ್ಜುಗೊಳಿಸುವ ತರಬೇತಿಯನ್ನು ಪಡೆಯಬೇಕೆನ್ನುವುದೇ ಇದರ ಉದ್ದೇಶವಾಗಿದೆ. ತರಬೇತಿ ಮಾದರಿಯನ್ನು "ಇಂಟರ್ನಶಿಪ್ ಮಾದರಿ" ಯೆಂದು ಕರೆಯಲಾಗಿದೆ. ಇಲ್ಲಿ ತರಬೇತಿ ಪಡೆಯುವವರನ್ನು ಅನುಭವಿ ಕಾರ್ಯ ಕರ್ತರಿಗೆ ತಗಲುಹಾಕಿ ಅವರಿಂದ ಕಲಿಯಲಾಗುತ್ತದೆ.

ಆರಂಭದ ವರ್ಷಗಳಲ್ಲಿ ತರಬೇತಿ ನೀಡುವುದನ್ನು ಯಾರಿಗೂ ನಿರಾಕರಿಸಿರಲಿಲ್ಲ. ಆದಾಗ್ಯೂ, ಅನೇಕರು ಶಿಕ್ಷಕರಾಗುವ ಆಕಾಂಕ್ಷೆಯನ್ನಿಟ್ಟುಕೊಂಡು ಬಂದವವರಾಗಿದ್ದು ಶಿಶುಗಳೊಂದಿಗೆ ಕೆಲಸ ಮಾಡಲು ಮತ್ತು ಅವರ ದೈಹಿಕ ಅಗತ್ಯಗಳನ್ನು ಪೂರೈಸಲು ಸಿದ್ಧರಿರಲಿಲ್ಲ. ಆದ್ದರಿಂದ ಸಂಚಾರಿ ಶಿಶು ಕೇಂದ್ರಗಳು ಸ್ವಯಂ-ಆಯ್ಕೆಯ ಕಾರ್ಯತಂತ್ರವನ್ನು ಬಳಸಲು ನಿರ್ಧರಿಸಿತು. ಅರ್ಜಿದಾರರನ್ನು ದಿನವೂ ಏನು ಚಟುವಟಿಕೆಗಳು ನಡೆಯುತ್ತವೆ ಎಂದು ಗಮನಿಸಲು ಮತ್ತು ಅವರು ಆಯ್ಕೆಯಾದರೆ ಏನೇನು ಕೆಲಸ ಮಾಡಬೇಕಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ಶಿಶು ಕೇಂದ್ರಗಳಲ್ಲಿ ಮಕ್ಕಳೊಂದಿಗೆ ಒಂದು ಇಡೀ ದಿನ

ಕಳೆಯುವಂತೆ ಹೇಳಲಾಯಿತು. ಯಾರು ಅಂಥ ಕೆಲಸವನ್ನು ಮಾಡಲು ತಯಾರಿದ್ದರೋ ಅವರು ಮಾತ್ರ ಕೆಲಸಕ್ಕೆ ಸೇರಲು ಮುಂದೆ ಬಂದರು. ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ತರಬೇತಿ ಕಾರ್ಯಕ್ರಮವು ಹುಡುಗ ಹುಡುಗಿಯರಿಗೆ ತಮ್ಮ ಪ್ರೌಢಶಾಲಾ ಶಿಕ್ಷಣದ ನಂತರ ಅದೊಂದು ವೃತ್ತಿ ಆಯ್ಕೆಯಾಗಿ ಪರಿಣಮಿಸಿದೆ. ಪ್ರವೇಶಕ್ಕಾಗಿ ಬೇಡಿಕೆಯು ಅಗತ್ಯಕ್ಕಿಂತ ಹೆಚ್ಚಾಗಿರುವುದರಿಂದ ಈಗ ಲಿಖಿತ ಪರೀಕ್ಷೆ ನಡೆಸಿ ಬುದ್ಧಿಶಕ್ತಿ ಮತ್ತು ಸಾಮರ್ಥ್ಯವನ್ನು ಒರೆಗೆಹಚ್ಚಿ ತರಬೇತಿಗೆ ಅಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳನ್ನು ತರಬೇತಿಗೆ ಆರಿಸುವಾಗ ಲಭ್ಯವಿರುವ ಖಾಲಿ ಹುದ್ದೆಗಳಿರುವ ಕೇಂದ್ರಗಳ ಸಂಖ್ಯೆ ಮತ್ತು ತರಬೇತಿ ಭತ್ಯೆ ನೀಡಲು ಹಣಕಾಸಿನ ಸ್ಥಿತಿಗತಿ ಹೇಗಿದೆ ಎಂಬುದನ್ನು ನೋಡಿಕೊಂಡು ಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ.

## 20.7 ಸಂಚಾರಿ ಶಿಶು ಕೇಂದ್ರಗಳ ವಿಶಿಷ್ಟ ಲಕ್ಷಣಗಳು

ಸಂಚಾರಿ ಶಿಶು ಕೇಂದ್ರಗಳಲ್ಲಿ ಶಿಶುಪಾಲನಾ ಕಾರ್ಯ ಕರ್ತರು ಅನೇಕ ಕೌಶಲಗಳನ್ನು ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತದೆ - ಅವುಳೆಂದರೆ, ಪ್ರಶ್ನಾ=ಆಧಾರಿತ, ಚಟುವಟಿಕೆ-ಉದ್ದೇಶಿತ ವಿಧಾನಗಳ ಮೂಲಕ ಮಕ್ಕಳಿಗೆ ಬೋಧಿಸುವ ಸಾಮರ್ಥ್ಯ ಹೊಂದಿರುವುದು; ಮಕ್ಕಳ ಮನೋಸಾಮಾಜಿಕ ಬೆಳವಣಿಗೆ ಬಗ್ಗೆ ಕಾಳಜಿ ವಹಿಸುವುದು; ಸೃಜನಶೀಲ ಕಲೆಯನ್ನು ಪ್ರೋತ್ಸಾಹಿಸುವುದು; ಅಡುಗೆ ಮಾಡಿ ಬಡಿಸುವುದು; ರೋಗ ಲಕ್ಷಣಗಳನ್ನು ಗುರುತಿಸಿ ಚಿಕಿತ್ಸೆ ನೀಡುವುದು; ಔಷಧಿ ನೀಡುವುದು; ಮತ್ತು ಆರೋಗ್ಯದ ಬಗ್ಗೆ ಶಿಕ್ಷಣ ನೀಡುವುದು. ಇದರೊಂದಿಗೆ ಅವರು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನೂ ಹೊಂದಿರಬೇಕಾಗುತ್ತದೆ. ಕ್ಷೇತ್ರ ಮಟ್ಟದಲ್ಲಿ ಅಡೆತಡೆಗಳ ಹೊರತಾಗಿಯೂ ಸತತವಾಗಿ ಹೊಂದಿಕೆ ಮಾಡಿಕೊಳ್ಳುತ್ತಾ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದನ್ನು ಅವರು ಕಲಿಯಬೇಕು. ಇವುಗಳಲ್ಲಿ ಕೆಲವು ಮತ್ತು ಇತರ ಕೆಲವು ಅಂಶಗಳು ಸಂಸ್ಥೆಯ ವಿಶೇಷ ಲಕ್ಷಣಗಳಾಗಿವೆ.

ನಾವೀಗ ಸಂಚಾರಿ ಶಿಶು ಕೇಂದ್ರಗಳ ಕೆಲವು ವಿಶಿಷ್ಟ ಲಕ್ಷಣಗಳನ್ನು ನೋಡೋಣ.

- ಇತರ ಸಂಸ್ಥೆಗಳಂತಲ್ಲದೆ, ಇಲ್ಲಿಯ ಕಾರ್ಯ ಕರ್ತರು ಕಠಿಣತಮ ಸಂದರ್ಭದಲ್ಲಿ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕಾಗುತ್ತದೆ. ಸಾಮಾನ್ಯವಾಗಿ ಈ ಶಿಶು ಕೇಂದ್ರಗಳು ನಗರ ಕೇಂದ್ರದಿಂದ ಬಹಳ ದೂರವಿರುವ ಮತ್ತು ಬರೀ ಕಲ್ಲುಮಣ್ಣಿನ ಚೂರುಪಾರುಗಳು ಮತ್ತು ಕಬ್ಬಿಣದ ಸರಳುಗಳಿಂದ ತುಂಬಿದ ಪರಿಸರವನ್ನು ಹೊಂದಿರುವ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಇರುತ್ತವೆ. ಕೇಂದ್ರಗಳಿಗೆ ಸರಾಗವಾಗಿ ಓಡಾಡಲು ಸಾರಿಗೆ ವ್ಯವಸ್ಥೆ ಇರುವುದಿಲ್ಲ, ಮತ್ತು ಕೆಲವೊಮ್ಮೆ ಶಿಶುಪಾಲನಾ ಕಾರ್ಯ ಕರ್ತರು ಹತ್ತಿರದ ಸಾರಿಗೆ ವ್ಯವಸ್ಥೆಯಿಂದ ತುಂಬಾ ದೂರ ನಡೆಯಬೇಕಾಗುತ್ತದೆ. ಬಹುತೇಕ ಸಂದರ್ಭದಲ್ಲಿ ಕಟ್ಟಡ ನಿರ್ಮಾತೃ ಶಿಶು ಕೇಂದ್ರಗಳನ್ನು ತಾತ್ಕಾಲಿಕ ಎಂದು ಭಾವಿಸುವುದರಿಂದ ಅಲ್ಲಿ ಸೌಲಭ್ಯಗಳ ಅಭಾವವಿರುತ್ತದೆ. ಸಾಮಾನ್ಯವಾಗಿ ಶೌಚಾಲಯಗಳಂತಹ ಮೂಲಭೂತ ಸೌಲಭ್ಯವೂ ಇರುವುದಿಲ್ಲ.
- ತಾಯಂದಿರು ಕೆಲಸಕ್ಕೆ ಹೋಗುವುದರಿಂದ, ಮತ್ತು ಕಾರ್ಯನಿರತರಾಗಿರುವ ಕಾರಣದಿಂದಾಗಿಯೋ ಅಥವಾ ತಿಳಿವಳಿಕೆಯ ಕೊರತೆಯಿಂದಾಗಿಯೋ ಅವರ ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸುವುದಿಲ್ಲವಾದ್ದರಿಂದ, ಶಿಶುಪಾಲನಾ ಕಾರ್ಯ ಕರ್ತರು ದಿನವೂ ಮನೆಮನೆಗೆ ಹೋಗಿ ಮಕ್ಕಳನ್ನು ಕೇಂದ್ರಕ್ಕೆ ಕರೆದುಕೊಂಡು ಬರುತ್ತಾರೆ. ಇದರ ಅನುಕೂಲವೆಂದರೆ, ಕಾರ್ಯ ಕರ್ತರು ದಿನವೂ ತಾಯಂದಿರನ್ನು ಅನೌಪಚಾರಿಕವಾಗಿ ಭೇಟಿ ಮಾಡುತ್ತಾರೆ ಮತ್ತು ಅವರ ಪ್ರಸ್ತುತ ಸಮಸ್ಯೆಗಳನ್ನು ಕಣ್ಣಾರೆ ಕಾಣುತ್ತಾರೆ ಹಾಗೂ ಅವುಗಳನ್ನು ಪರಿಹರಿಸಲು ಸಹಾಯ ಮಾಡುತ್ತಾರೆ. ಕಾರ್ಯ ಕರ್ತರಿಗೆ ಎಲ್ಲಾ ರೀತಿಯದ ಸಮಸ್ಯೆಗಳು ಎದುರಾಗಬಹುದು - ಮಗುವಿಗೆ ಹುಷಾರಿಲ್ಲದಿರಬಹುದು, ಅಥವಾ ಕುಟುಂಬದಲ್ಲಿ ಜಗಳವಾಗುತ್ತಿರಬಹುದು.
- ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಹೆಚ್ಚಿನ ಕುಟುಂಬಗಳು ಬದಲಾಗುತ್ತಲೇ ಇರುವುದರಿಂದ ಪ್ರತಿ ತಿಂಗಳು ಕಾರ್ಯಕ್ರಮಕ್ಕೆ ಹೊಸ ಮಕ್ಕಳು ಸೇರಿಕೊಳ್ಳುತ್ತಾರೆ. ಸಾಮಾನ್ಯವಾಗಿ, ಶೇಕಡ 20% ರಿಂದ 30% ಮಕ್ಕಳು ಕೇಂದ್ರಕ್ಕೆ ಹೊಸಬರಾಗಿರುತ್ತಾರೆ. ಆದ್ದರಿಂದ ಶಿಶುಪಾಲನಾ ಕಾರ್ಯ ಕರ್ತರು ಆರೋಗ್ಯ, ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಪದೇಪದೇ ಮೂಲ

ಸಂದೇಶಗಳನ್ನು ಹೇಳುತ್ತಲೇ ಇರಬೇಕಾಗುತ್ತದೆ. ಇದು ಬೇಸರ ಹುಟ್ಟಿಸುವಷ್ಟು ವೈವಿಧ್ಯವಿಲ್ಲದ ಪುನರಾವರ್ತಿಸುವ ಕ್ರಿಯೆ ಆಗದಿರಲು, ಕಾರ್ಯ ಕರ್ತರು ಹೊಸಹೊಸ ವಿಧಾನಗಳನ್ನು ಹುಡುಕಿಕೊಳ್ಳಬೇಕು ಮತ್ತು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹೊಸ ರೀತಿಗಳನ್ನು ಆಲೋಚಿಸಬೇಕು.

- ಕಾರ್ಯ ಕರ್ತರು ಅವರ ಎಲ್ಲ ತರಬೇತಿಯನ್ನು ಕಾರ್ಯ ನಿರ್ವಹಿಸುತ್ತಲೇ ಪಡೆಯುವುದರಿಂದ, ಮತ್ತು ಮನೆಯಲ್ಲಿ ಸಿದ್ಧಾಂತಗಳನ್ನು ಓದಲು ಸಮಯ ಇರುವುದಿಲ್ಲವಾದ್ದರಿಂದ, ಮಾಹಿತಿಯನ್ನು ಸುಲಭವಾಗಿ ನೆನಪಿಟ್ಟುಕೊಳ್ಳಲು ಮತ್ತು ಬೇಕಾದಾಗ ನೆನಪಿಗೆ ತಂದುಕೊಳ್ಳಲಾಗುವಂತೆ ಸರಳ ಮತ್ತು ಸ್ಪಷ್ಟವಾದ ರೀತಿಯಲ್ಲಿ ಜ್ಞಾನವನ್ನು ನೀಡಬೇಕಾಗುತ್ತದೆ. ಇದಕ್ಕಾಗಿ, ತರಬೇತಿದಾರರನ್ನು ಒಳಗೊಂಡಂತೆ, ಎಲ್ಲಾ ಕಾರ್ಯ ಕರ್ತರು ತಮ್ಮ ಕೌಶಲ್ಯಗಳನ್ನು ವರ್ಧಿಸಿಕೊಳ್ಳಲು ಅಲ್ಪಾವಧಿಯ ಮರುನೋಟದ ಕೋರ್ಸುಗಳನ್ನು (refresher courses) ಮಾಡಬೇಕಾಗುತ್ತದೆ. ಆದ್ದರಿಂದ, ವಿಷಯಜ್ಞಾನದ ಸಂವರ್ಧನೆ ಮತ್ತು ಕೌಶಲಗಳ ಸಾಮರ್ಥ್ಯ ವರ್ಧನೆಗೆಂದು ನಡೆಯುವ ತರಬೇತಿಯು ಒಂದು ಸತತವಾದ ಪ್ರಕ್ರಿಯೆಯಾಗಿರುತ್ತದೆ.
- ಬೋಧನಾ ಸಹಾಯಕ ಸಾಮಗ್ರಿಗಳನ್ನು ಬಳಸುವುದನ್ನು ಪ್ರೋತ್ಸಾಹಿಸಲಾಗುತ್ತದೆ, ಮತ್ತು ಅನುಭವದಿಂದ ಕಂಡುಕೊಂಡಂತೆ ಸ್ವತಃ ಶಿಕ್ಷಕರೇ ಆಟ ಸಾಮಗ್ರಿಗಳನ್ನು ತಯಾರಿಸಿದರೆ ಅವರು ಸಂದರ್ಭವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದಲ್ಲದೆ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಲು ಕೂಡ ಸಮರ್ಥರಾಗುತ್ತಾರೆ. ಅವರು ಗುಂಪುಗಳಲ್ಲಿ ಕೆಲಸ ಮಾಡುತ್ತಾರೆ, ಗುರಿಗಳನ್ನು ಚರ್ಚಿಸುತ್ತಾರೆ, ಮತ್ತು ಅಗತ್ಯವಿರುವ ಪರಿಕರವನ್ನು ತಯಾರಿಸುತ್ತಾರೆ. ಪುನಾಪುನಾ ಮಾಡುವುದರ ಮೂಲಕ ಹೆಚ್ಚಿನ ಕಾರ್ಯ ಕರ್ತರು ಚಿತ್ರ ಬಿಡಿಸುವುದರಲ್ಲಿ, ಕರಕುಶಲ ಕಲೆಗಳಲ್ಲಿ, ಮತ್ತು ಕಾರ್ಡ್‌ಬೋರ್ಡ್ ಡಬ್ಬಗಳು, ಹಳೆಯ ಬಾಟಲಿಗಳು ಹಾಗೂ ವೃತ್ತ ಪತ್ರಿಕೆಗಳಂತಹ ದಿನನಿತ್ಯದ ತ್ಯಾಜ್ಯ ಮತ್ತು ಎಸೆಯುವ ವಸ್ತುಗಳಿಂದ ಕೈಬೊಂಬೆಗಳನ್ನು ತಯಾರಿಸಲು ಕುಶಲರಾಗಿದ್ದಾರೆ.

- ಬೆಂಬಲಿಸುವ ಮತ್ತು ಮೇಲ್ವಿಚಾರಣೆಯ ಕ್ರಮಗಳ ಮೂಲಕ ಉತ್ತಮ ಗುಣಮಟ್ಟದ ಮಕ್ಕಳ ಆರೈಕೆಯನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

### 20.7.1 ಬೆಂಬಲಿಸುವ ಕ್ರಮಗಳು

- ಬಹುತೇಕ ಕಾರ್ಯ ಕರ್ತರು ಹೆಚ್ಚು ಅನುಕೂಲವಿಲ್ಲದ ಸಮಾಜೋ-ಆರ್ಥಿಕ ಸ್ಥಿತಿಯಿಂದ ಬಂದವರಾಗಿರುವುದರಿಂದ ದೈಹಿಕವಾಗಿ, ಸಂವೇಗಾತ್ಮಕವಾಗಿ ಅವರಿಗೇ ಆರೋಗ್ಯ ಸಮಸ್ಯೆಗಳಿರಬಹುದು. ಅವರಿಗೆ ಸಾಕಷ್ಟು ಆರೈಕೆ ಮತ್ತು ಬೆಂಬಲದ ಅಗತ್ಯತೆ ಇರುತ್ತದೆ. ನಿಯತವಾಗಿ ಕಾರ್ಯ ಕರ್ತರ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ, ಮತ್ತು ಸೂಕ್ತ ಪರಿಹಾರಗಳನ್ನೂ ಒದಗಿಸಲಾಗುತ್ತಿದೆ. ಅವಶ್ಯಕತೆಯಿದ್ದರೆ ಅವರನ್ನು ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ. ಕಾರ್ಯ ಕರ್ತರಿಗೂ ಕೂಡ ಪೂರಕ ಪೌಷ್ಟಿಕಾಂಶಗಳನ್ನು ಕೊಡಲಾಗುತ್ತಿದೆ.
- ತೀವ್ರ ಆರೋಗ್ಯ ತೊಂದರೆಯಿಂದ ಬಳಲುತ್ತಿರುವ ಕಾರ್ಯ ಕರ್ತರಿಗೆ ವಿಶೇಷ ಹಣಕಾಸು ಸಹಾಯವನ್ನು ಒದಗಿಸಲಾಗುತ್ತಿದೆ ಮತ್ತು ಗುಂಪು ಆರೋಗ್ಯ ವಿಮೆಯಂತಹ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದೆ.
- ಗುಂಪು ಚಟುವಟಿಕೆಗಳು, ನಾಟಕ, ಯೋಗ, ಸಂಗೀತ ಮುಂತಾದವುಗಳ ಮೇಲೆ ವಿಶೇಷ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದರ ಮೂಲಕವಲ್ಲದೆ, ಸಿಬ್ಬಂದಿ ಗೋಷ್ಠಿ ಹಾಗೂ ಪಿಕ್ನಿಕ್ಗಳನ್ನು ಆಯೋಜಿಸುವುದರ ಮೂಲಕವೂ ಸಹ ಮನೋಸಾಮಾಜಿಕ ಆಯಾಮದ ಬೆಳವಣಿಗೆಯನ್ನು ಬೆಂಬಲಿಸಲಾಗುತ್ತಿದೆ. ಈ ಚಟುವಟಿಕೆಗಳು ಕಾರ್ಯ ಕರ್ತೆಯರಿಗೆ ಸ್ನೇಹ ಮತ್ತು ಸಹಪಾಠಿ ಗುಂಪಿನ ಬೆಂಬಲವನ್ನು ಬೆಳಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸುತ್ತಲೇ ಅವರಲ್ಲಿ ಆತ್ಮವಿಶ್ವಾಸ ಮತ್ತು ಅನುಭೂತಿಯನ್ನು ಅಂತರ್ಗತಮಾಡಿಕೊಳ್ಳಲು ಸಹಾಯಮಾಡುತ್ತದೆ.
- ಎಲ್ಲರೂ ಬ್ಯಾಂಕ್ ಸಂಬಂಧಿತ ವ್ಯವಹಾರಗಳು, ಕೇಂದ್ರದ ಹಣಕಾಸು ನಿರ್ವಹಣೆ, ಸಂಸ್ಥೆಯ ದತ್ತಿನಿಧಿಯ ಆಯವ್ಯಯ ಅಂದಾಜು ಮತ್ತು ಅದರ ಸೂಕ್ತ ಬಳಕೆ ಇತ್ಯಾದಿಗಳ ಬಗ್ಗೆ ಕಲಿಯುವಂತೆ ಪ್ರೋತ್ಸಾಹಿಸುವುದರ ಮೂಲಕ ಹಣಕಾಸಿನ ಬಗ್ಗೆ ತಿಳಿವಳಿಕೆ ಮತ್ತು “ಕಾನೂನು ಸಾಕ್ಷರತೆ” ಯನ್ನು ಕೊಡಲಾಗುತ್ತಿದೆ. ಮಹಿಳೆಯರ ಕಾನೂನು

ಹಕ್ಕುಗಳ ಬಗ್ಗೆ, ವಿಶೇಷವಾಗಿ ಮದುವೆ ಮತ್ತು ಆಸ್ತಿಗೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸಗಳು ಮಹಿಳೆಯರಿಗೆ ತಮ್ಮ ವೃತ್ತಿ ಮತ್ತು ವೈಯಕ್ತಿಕ ಬದುಕನ್ನು ನಿಭಾಯಿಸಲು ಸಜ್ಜಾಗಿದ್ದೇವೆ ಎಂಬ ಭರವಸೆಯನ್ನು ನೀಡುತ್ತದೆ.

### 20.7.2 ಮೇಲ್ವಿಚಾರಣಾ ಕ್ರಮಗಳು

- ಸಂಪನ್ಮೂಲಗಳ ಸದ್ಬಳಕೆಯನ್ನು ಖಾತರಿಪಡಿಸಿಕೊಳ್ಳಲು ಮತ್ತು ನಿಧಿಯ ಸೂಕ್ತ ವಿತರಣೆಗಾಗಿ ಎಲ್ಲಾ ಕೇಂದ್ರಗಳಲ್ಲೂ ನಿಖರವಾದ ದಾಖಲೆಗಳನ್ನು ಇಡಲಾಗುತ್ತಿದೆ. ಕಾರ್ಯ ಕರ್ತರಿಗೆ ದಾಖಲೆಗಳನ್ನಿಡಲು, ದಾಸ್ತಾನನ್ನು ಪರಿಶೀಲಿಸಲು ಮತ್ತು ಗುಣಮಟ್ಟ ಕಾಪಾಡುವುದರಲ್ಲಿ ತರಬೇತಿ ನೀಡಲಾಗಿರುತ್ತದೆ. ಇದು ಪ್ರಾಮಾಣಿಕತೆ ಮತ್ತು ನ್ಯಾಯಪರತೆಯನ್ನು ಮುಖ್ಯ ಆವಶ್ಯಕತೆಗಳನ್ನಾಗಿ ಹೊಂದಿದ್ದು ಉತ್ತರದಾಯಿತ್ವವನ್ನು ಖಾತರಿಪಡಿಸುತ್ತದೆ.
- ಎಲ್ಲಾ ಹಂತಗಳಲ್ಲೂ ನಿರಂತರ ಅಂತರಕ್ರಿಯೆಯು ಸಂಸ್ಥೆಗೆ ನಿಷ್ಠೆಯಾಗಿರಬೇಕೆಂಬ ಭಾವನೆಯನ್ನು ಬೆಳಸಿಕೊಳ್ಳಲು ಸಹಾಯ ಮಾಡುತ್ತದೆ. ಇದು ಕೆಲಸವು ಸುಸೂತ್ರವಾಗಿ ನಡೆದು ಕಾರ್ಯಕ್ರಮದ ಗುಣಮಟ್ಟದಲ್ಲಿ ರಾಜಿಯಾಗದಂತೆ ನೋಡಿಕೊಳ್ಳುತ್ತದೆ. ಉದಾಹರಣೆಗೆ, ಓರ್ವ ಕಾರ್ಯ ಕರ್ತೆಯು ಕೇಂದ್ರದ ಬಾಗಿಲು ತೆರೆದು ದಿನವನ್ನು ಪ್ರಾರಂಭಿಸಲು ಜವಾಬ್ದಾರರಾಗಿದ್ದು ಮತ್ತು ಅವರ ಬಳಿ ಬೀಗದ ಕೀ ಇದ್ದು, ಅವರಿಗೆ ನಿರ್ದಿಷ್ಟ ದಿನದಂದು ಹೋಗಲು ಆಗದಿದ್ದರೆ, ನಿಗದಿತ ಸಮಯದ ಮುನ್ನವೇ ಆಕೆಯು ಕೀ ಸಹೋದ್ಯೋಗಿಯೊಬ್ಬರಿಗೆ ತಲುಪುವುದನ್ನು ಖಚಿತಪಡಿಸುತ್ತಾರೆ. ಅಥವಾ ಯಾವುದಾದರೂ ಕೇಂದ್ರದಲ್ಲಿ ಕಾರ್ಯ ಕರ್ತರ ಕೊರತೆಯಿದ್ದರೆ, ಆಡಳಿತದಿಂದ ಆದೇಶಕ್ಕೂ ಕಾಯದೆ, ಅವರವರಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಕೊರತೆ ಬಿದ್ದ ಕಡೆ ಒಬ್ಬರನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ.
- ನಿಯತ ಮತ್ತು ನಿಯತಕಾಲಿಕ ಸಭೆಗಳನ್ನು ಆಯೋಜಿಸಲಾಗುತ್ತದೆ ಮತ್ತು ಅವು ಎಲ್ಲಾ ಕಾರ್ಯ ಕರ್ತರ ಸತತ ಮೌಲ್ಯಮಾಪನದ ಸಭೆಗಳಾಗಿ ಕಾರ್ಯನಿರ್ವಹಿಸುತ್ತವೆ. ದೂರುಗಳು, ಅದರಂತೆ ವಿಶೇಷ ಪ್ರಯತ್ನಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಎಲ್ಲರ ಗಮನಕ್ಕೆ

ತರಲಾಗುತ್ತದೆ; ಮಾಹಿತಿಯನ್ನು ಎಲ್ಲರೂ ಎಲ್ಲರೊಂದಿಗೆ ಹಂಚಿಕೊಳ್ಳುತ್ತಾರೆ.

- ಕಾರ್ಯ ಕರ್ತರೊಬ್ಬರ ಹಿರಿಯ ಅಧಿಕಾರಿಗಳು ಮತ್ತು ಸಹಾಯಕ ಸಿಬ್ಬಂದಿಗಳು ಮಾಡಿದ ಮೌಲ್ಯಮಾಪನಗಳ ಮೂಲಕ ವಿವರವಾದ ಮತ್ತು ದಾಖಲಿಸಿದ ಮೌಲ್ಯಮಾಪನಗಳ ವರದಿಗಳಿವೆ. ಈ ಮೌಲ್ಯಮಾಪನಗಳು ಸಹಯೋಗದ್ದಾಗಿವೆ, ಅಂದರೆ ಸಂಬಂಧಿತ ಅಭ್ಯರ್ಥಿಯು ಚರ್ಚೆಗಳಲ್ಲಿ ಭಾಗವಹಿಸುತ್ತಾರೆ ಮತ್ತು ತಮ್ಮಲ್ಲಿನ ಕೊರತೆಗಳನ್ನು ಸಮರ್ಥಿಸಿಕೊಳ್ಳಲು ಮತ್ತು ಅವುಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ.
- ಕಡಮೆ ಬದ್ಜೆಟ್ಟು ಹೊಂದಿರುವ ಕಲ್ಯಾಣ ಸಂಸ್ಥೆಯಲ್ಲಿ ಯಾವುದೇ ಹಣಕಾಸಿನ ಉತ್ತೇಜಕಗಳನ್ನು ನೀಡದೆ ಸಿಬ್ಬಂದಿ ಸದಸ್ಯರನ್ನು ಹುರಿದುಂಬಿಸುವುದೇ ಬಹಳ ಕಷ್ಟದ ಕೆಲಸ. ಸಂಸ್ಥೆಯು, ಖಂಡಿತವಾಗಿ ವಾರ್ಷಿಕ ವೇತನ ಹೆಚ್ಚಳ, ಅಸಾಧಾರಣ ಕೆಲಸಕ್ಕೆಂದು ಬಡ್ತಿ ಮತ್ತು ವಿಶೇಷ ಪ್ರತಿಫಲಗಳನ್ನು ನೀಡುವ ಔಪಚಾರಿಕ ವ್ಯವಸ್ಥೆಗಳನ್ನು ಹೊಂದಿದೆ. ಆದರೆ ಬಡ್ತಿಯ ರೂಪದಲ್ಲಿ ಬಹಳಷ್ಟು ಹಣಕಾಸಿನ ಕೊರತೆಗೆ ಪರಿಹಾರವಾಗಿ ಕಾರ್ಯ ಕರ್ತರಿಗೆ ಮನ್ನಣೆ, ವಿಶ್ವಾಸ ಮತ್ತು ವೈಯಕ್ತಿಕ ಕಾಳಜಿ ತೋರುವ ರೂಪದಲ್ಲಿ ಪ್ರತಿಫಲಗಳನ್ನು ನೀಡಬೇಕಾಗುತ್ತದೆ. ಈ ಉದ್ದೇಶ ಸಾಧನೆಗಾಗಿ ಆಡಳಿತವು ನಾವೀನ್ಯ ವಿಧಾನಗಳನ್ನು ಬಳಸುತ್ತದೆ. ಉದಾಹರಣೆಗೆ, ಕಾರ್ಯ ಕರ್ತರ ಸಾಮರ್ಥ್ಯವನ್ನು ಶೈಕ್ಷಣಿಕ ವಿದ್ಯಾರ್ಹತೆಗೆ ಬದಲಾಗಿ ಅವರ ಮನೋಭಾವ ಮತ್ತು ಯೋಗ್ಯತೆಗೆ ಸಂಬಂಧಿಸಲಾಗುತ್ತದೆ. ಆದರೆ ಶೈಕ್ಷಣಿಕ ವಿದ್ಯಾರ್ಹತೆಯನ್ನು ನಿರ್ಲಕ್ಷಿಸಿ ಯೋಗ್ಯತೆಗಷ್ಟೇ ಸಂಬಂಧಿಸಿ ವರ್ಗಶ್ರೇಣಿಗಳನ್ನು ಸ್ಥಾಪಿಸುವುದು ಬಹಳ ಕಷ್ಟವಾಗಿತ್ತು. ಹಿರಿಯ ಕಾರ್ಯ ಕರ್ತರಿಗೆ ಹೊಸ ನಾಮಸೂಚಿಗಳನ್ನು ನೀಡುವ ಪರ್ಯಾಯ ಕಾರ್ಯತಂತ್ರವೊಂದನ್ನು ಬಳಸಲಾಯಿತು.
- ಆವಶ್ಯವಾಗಿ, ಕಾರ್ಯಕ್ರಮ (ಶಿಶು ಕೇಂದ್ರಗಳು), ತರಬೇತಿ ಮತ್ತು ವರಮಾನಗಳು ಸಂದರ್ಭಕ್ಕೆ ಹೊಂದಿಸಲಾಗುವಂತಹದ್ದವು. ಉದಾಹರಣೆಗೆ, ಶಿಶು ಕೇಂದ್ರಗಳು ಕಟ್ಟಡ ನಿರ್ಮಾಣ ಕಾರ್ಮಿಕರ ಕೆಲಸದ ಸಮಯ, ಸೌಕರ್ಯಗಳ ಲಭ್ಯತೆ ಮತ್ತು ಸಮುದಾಯದ

ಅರಿವಿನ ಮಟ್ಟಕ್ಕೆ ಅನುಗುಣವಾಗಿರಬೇಕು. ಅದೇರೀತಿ, ತರಬೇತಿಯಲ್ಲೂ ಸಿದ್ಧಾಂತ ಮತ್ತು ಪರಿಪಾಠದ ನಡುವೆ, ಮಾಹಿತಿ ಮತ್ತು ವೈಯಕ್ತಿಕ ಬೆಳವಣಿಗೆಯ ನಡುವಿನ ಸಮತೋಲನವು ತರಬೇತಿ ಪಡೆಯುವವರ ಪರಿಸ್ಥಿತಿ, ಸಮಯ ಲಭ್ಯತೆ ಮತ್ತು ಕಾರ್ಯ ಕ್ಷೇತ್ರದಲ್ಲಿ ಅದರ ಪ್ರಸ್ತುತತೆಯನ್ನು ಅವಲಂಬಿಸಿರುತ್ತದೆ. ಹಣಕಾಸಿನ ಇತಿಮಿತಿಗಳಿಂದಾಗಿ (ಸಂದರ್ಭಕ್ಕೆ) ಹೊಂದಿಸಲಾಗಬೇಕಾಗಿರುವುದು ಮತ್ತೊಂದು ಬಹು ಮುಖ್ಯ ಅಂಶವಾಗಿದೆ. ಉದಾಹರಣೆಗೆ, ಕೆಲಸದ ವೇಳೆ, ಸಾರಿಗೆ ಭತ್ಯೆ ಇತ್ಯಾದಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ನಿಮಯಗಳಿದ್ದರೂ, ಕೆಲವು ಕಷ್ಟದ ಪರಿಸ್ಥಿತಿಗಳಲ್ಲಿ, ಅಂದರೆ ಕಠಿಣ ಪರಿಸ್ಥಿತಿ ಭತ್ಯೆ ನೀಡಲು ಹಣಕಾಸಿನ ಕೊರತೆಯಿದ್ದಾಗ ಕೆಲಸದ ವೇಳೆಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡುವ ಮೂಲಕ ಅದನ್ನು ಸರಿದೂಗಿಸಲಾಗುತ್ತದೆ.

ಆದ್ದರಿಂದ, ಪ್ರೇರಣೆ ಮತ್ತು ವೃತ್ತಿ ಸಂತುಷ್ಟಿಯಿಲ್ಲದೆ, ಉತ್ತಮ ಗುಣಮಟ್ಟದ ಮಕ್ಕಳ ಆರೈಕೆಯೆನ್ನುವುದು ಅಸಾಧ್ಯದ ಮಾತು; ಇವು ವೈಯಕ್ತಿಕ ಅಂತರಕ್ರಿಯೆ ಮತ್ತು ಸತತವಾಗಿ ಮನ್ನಣೆ ಹಾಗೂ ಮೆಚ್ಚುಗೆಯಂತಹ ಉತ್ತೇಜಕಗಳನ್ನು ಹೆಚ್ಚಿಸುವ ಮೂಲಕ ಸಾಧ್ಯವಾಗುತ್ತದೆ. ಇದನ್ನೇ ಸಂಚಾರಿ ಶಿಶು ಕೇಂದ್ರಗಳು ತನ್ನ ಕಾರ್ಯ ಕರ್ತರಿಗೆ ಸಂಬಂಧಿಸಿದಂತೆ ಸಾಧಿಸುತ್ತದೆ.

## 20.8 ಶಿಶುಪಾಲನೆಗೆ ಹಣ

ಮಕ್ಕಳಿಗೆ ಉತ್ತಮ ಆರೈಕೆ ಎನ್ನುವುದು ಅಗ್ಗವಾಗಿ ಸಿಗುವುದಿಲ್ಲ. ಅನೇಕ ಉದ್ದೇಶಗಳಿಗಾಗಿ ಹಣಕಾಸಿನ ಅಗತ್ಯವಿದೆ.ಅವು ಇವುಗಳನ್ನು ಒಳಗೊಂಡಿದೆ:

- ಮಕ್ಕಳಿಗೆ ಮೂಲಸೌಕರ್ಯಗಳನ್ನು ಒದಗಿಸಲು- ಆಹಾರ, ಔಷಧಿ ಮತ್ತು ಬಟ್ಟೆ
- ಬೋಧನಾ ಸಾಮಗ್ರಿ ಮತ್ತು ಸೃಜನಶೀಲ ಕಲೆ
- ಸಮುದಾಯ ಕಾರ್ಯಕ್ರಮಗಳು- ನಾಟಕ, ಚಟುವಟಿಕೆಗಳು ಮತ್ತು ಸಭೆಗಳು
- ಶಿಶುಪಾಲಕರಿಗೆ ವೇತನ
- ಸಿಬ್ಬಂದಿ ಕಲ್ಯಾಣ ಮತ್ತು ಸಿಬ್ಬಂದಿ ತರಬೇತಿ
- ಶಿಶು ಕೇಂದ್ರಗಳಿಗೆ ಅಗತ್ಯವಿರುವ ಸಾಮಾನುಗಳ ಸಾಗಣೆ

ಈ ಕಾರ್ಯಕ್ರಮಗಳಿಗೆ ಹಣವು ಅನೇಕ ಮೂಲಗಳಿಂದ ಬರುತ್ತದೆ:

- ಸ್ವಇಚ್ಛೆಯಿಂದ ಕೊಡುಗೆ ನೀಡಲು ಬಯಸುವ ದಾನಿಗಳು ಮತ್ತು ಸ್ವಯಂಸೇವಕರ ಸ್ವಯಂಪ್ರೇರಿತ ಸ್ಪಂದನಗಳು
- ಉದ್ಯೋಗದಾತರ ಮತ್ತು ಕಟ್ಟಡ ನಿರ್ಮಾಣಕಾರರ ಕೊಡುಗೆ
- ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿ (ಸರ್ಕಾರ)
- ದನ ಸಹಾಯ ಮಾಡುವ ವಿದೇಶಿ ನಿಯೋಗಗಳು ಮತ್ತು ಸಂಸ್ಥೆಗಳು
- ದತ್ತಿನಿಧಿ ಸಂಗ್ರಹಕ್ಕೆಂದು ಸ್ವಯಂಸೇವಕರು ಹಮ್ಮಿಕೊಳ್ಳುವ ಚಟುವಟಿಕೆಗಳು
- ಪ್ರಾಯೋಜಿತ ಕಾರ್ಯಕ್ರಮ, ಇಲ್ಲಿ ಮಗುವಿಗೆ ತಗುಲುವ ವಾರ್ಷಿಕ ವೆಚ್ಚವು ಪ್ರಾಯೋಜಕರಿಂದ ಬರುತ್ತದೆ

ವಿವಿಧ ಮೂಲಗಳಿಂದ ಬಂದರೂ ಆದಾಯದ ಅನುಪಾತವು ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತದೆ. ಅನುಬಂಧ 1 ರಲ್ಲಿ ಒಂದು ಉದಾಹರಣೆಯನ್ನು ಕೊಡಲಾಗಿದೆ. ಅದನ್ನು ಆದಾಯ ವೆಚ್ಚದ ವಾರ್ಷಿಕ ಚಿತ್ರಣದ ಮಾದರಿಯಾಗಿ ಪರಿಗಣಿಸಬಹುದು.

## 20.9 ಕಾರ್ಯಕ್ರಮದ ಪ್ರಭಾವ

ಉದ್ದಿಷ್ಟ ಗುಂಪಿಗೆ ನೇರ ಪ್ರಯೋಜನ ಒದಗಿಸುವುದಲ್ಲದೆ ಕಾರ್ಯಕ್ರಮದ ಪ್ರಭಾವವನ್ನು ಇತರ ಮಟ್ಟಗಳಲ್ಲಿಯೂ ಕಾಣಬಹುದಾಗಿದೆ. ಅದರಲ್ಲಿ ಕೆಲವನ್ನು ನಾವೀಗ ಪರಿಶೀಲಿಸೋಣ:

- **ಪರಿಣತಿ ಹಂಚಿಕೊಂಡಿರುವುದು**

  ಕಾರ್ಯಕ್ರಮವು ಒಂದು ಸಮಗ್ರ, ಸಂಯೋಜಿತ ಮತ್ತು ನಾವೀನ್ಯ ಮಾದರಿಯಾಗಿ ವಿಕಾಸಗೊಂಡಂತೆ ಇತರ ಸಂಸ್ಥೆಗಳು ಮತ್ತು ಗುಂಪುಗಳು ಈ ಅನುಭವದಿಂದ ಕಲಿಯಲು ಆಕರ್ಷಿತರಾದರು.

  ಹೀಗೆ, ಸಂಚಾರಿ ಶಿಶು ಕೇಂದ್ರಗಳು ತಮ್ಮ ಪರಿಣಿತಿಯನ್ನು ಸಮಾಜ ಸೇವೆ ಮತ್ತು ಮಕ್ಕಳ ಅಭಿವೃದ್ಧಿ, ವೈದ್ಯಕೀಯ ಕಾಲೇಜುಗಳ ರೋಗ ನಿರೋಧಕ ಮತ್ತು ಸಾಮಾಜಿಕ ಔಷಧಿ ಇಲಾಖೆಗಳಂತಹ ಪ್ರಮುಖ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಹಂಚಿಕೊಂಡಿರುವುದಲ್ಲದೆ ಸಂಶೋಧನಾ ಸಂಸ್ಥೆಗಳೊಂದಿಗೂ ಕೂಡ ಹಂಚಿಕೊಂಡಿದೆ.

.

- **ಜಾಲಬಂಧ ನಿರ್ಮಾಣ**

ಶಿಶು ಆರೈಕೆ, ನಾವೀನ್ಯ ಬೋಧನಾ ವಿಧಾನಗಳು, ಸಿಬ್ಬಂದಿ ತರಬೇತಿ, ಕಡಮೆ ಸಂಪನ್ಮೂಲಗಳನ್ನು ಹೊಂದಿದ ಸರ್ಕಾರೇತರ ಸಂಸ್ಥೆಗಳ ನಿರ್ವಹಣೆ, ಮತ್ತು ಸಮುದಾಯಕ್ಕೆ ಸಂದೇಶಗಳನ್ನು ತಲುಪಿಸಲು ನಾಟಕ, ಸೂತ್ರ ಬೊಂಬೆಗಳ ಪ್ರದರ್ಶನಗಳಂತಹ ಸೃಜನಶೀಲ ಕಲೆ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಂಚಾರಿ ಶಿಶು ಕೇಂದ್ರಗಳು ಪರಿಣಿತಿಯನ್ನು ಬೆಳಸಿಕೊಳ್ಳುವುದಕ್ಕೆ ಅವು ಎದುರಿಸಿದ ಸನ್ನಿವೇಶಗಳು ಕಾರಣವಾಗಿವೆ. ಶಿಶು ಕೇಂದ್ರಗಳ ಪರಿಣಿತಿಯು ಮಾನ್ಯತೆ ಪಡೆದ ಫಲವಾಗಿ, ಅನೇಕ ಸಂಸ್ಥೆಗಳ ನಡುವೆ ಅನೌಪಚಾರಿಕ ಜಾಲಬಂಧವನ್ನು ಕಟ್ಟಿಕೊಳ್ಳಲು ಸಾಧ್ಯವಾಗಿ ಅವು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಉದ್ದೇಶವನ್ನು ಬಲಗೊಳಿಸಿತು.

- **ವಕಾಲತ್ತು**

ಹಲವು ವರ್ಷಗಳಿಂದ, ಸಂಘಟಿತ, ಅಸಂಘಟಿತ ವಲಯಗಳ ಎಲ್ಲ ಮಹಿಳೆಯರಿಗಾಗಿ ECCE ಅನ್ನು ಒಂದು ಸಮಗ್ರ ಸೇವೆಯನ್ನಾಗಿ ಒದಗಿಸುವ ಪರವಾಗಿ ವಕಾಲತ್ತು ವಹಿಸುವುದು ಅಗತ್ಯ ಎಂಬುದು ಸ್ಪಷ್ಟವಾಯಿತು.

ಸಂಚಾರಿ ಶಿಶು ಕೇಂದ್ರಗಳನ್ನು ಪ್ರಾರಂಭಿಸಿದಾಗ ನೀತಿನಿಯಮ ರೂಪಿಸುವ ಸ್ಥಾನದಲ್ಲಿರುವವರಿಗೆ ECCE ಮತ್ತು ಶಿಶುಪಾಲನಾ ಕಾರ್ಯ ಕರ್ತರಿಗೆ ತರಬೇತಿ ನೀಡುವ ಅಗತ್ಯತೆಯ ಬಗ್ಗೆ ತಿಳಿವಳಿಕೆ ನೀಡಬೇಕಾಗಿತ್ತು ಎನ್ನುವುದು ಆಸಕ್ತಿದಾಯಕ ವಿಷಯವಾಗಿದೆ. ಇದು ಸರ್ಕಾರಿ ಸೇವೆಯಲ್ಲಿರುವವರು, ಪುರಸಭೆಯ ಅಧಿಕಾರಿಗಳು, ದಾನಿಗಳು, ಕಟ್ಟಡ ನಿರ್ಮಾಣಕಾರರು ಮತ್ತು ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡಿತ್ತು. ಕೊನೆಗೂ, 25 ವರ್ಷಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡಿ ಗುಣಮಟ್ಟದ ಶಿಶುಪಾಲನಾ ಮಾದರಿಯಾದ ಸಂಚಾರಿ ಶಿಶು ಕೇಂದ್ರಗಳು, ಮಕ್ಕಳೊಂದಿಗೆ ಕೆಲಸ ಮಾಡುತ್ತಿರುವ ಇತರ ಸಂಸ್ಥೆಗಳ ಸಹಯೋಗದೊಂದಿಗೆ ಶಿಶು ಕೇಂದ್ರಗಳ ರಾಷ್ಟ್ರೀಯ ವೇದಿಕೆ ಯೊಂದನ್ನು ಸ್ಥಾಪಿಸಲು ಸಾಧನಭೂತವಾಗಿದೆ. ಅಲ್ಲದೆ, ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿನ ನೀತಿ ನಿರೂಪಕರು ತಮ್ಮ ದತ್ತಿನಿಧಿ ಯೋಜನೆಗಳಲ್ಲಿ ಸಂಚಾರಿ ಶಿಶು ಕೇಂದ್ರಗಳ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ, ಮತ್ತು ಬಡತನ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಆಯೋಜಿಸಲಾಗುವ

ಕಾರ್ಯಾಗಾರಗಳು ಸಂಚಾರಿ ಶಿಶು ಕೇಂದ್ರಗಳ ಕೇತ್ರಕಾರ್ಯ ಸಿಬ್ಬಂದಿ ಮತ್ತು ಆಯೋಜಕರ ಶ್ರೀಮಂತಿಕೆಯ ಅನುಭವವನ್ನು ಬಳಸದೇ ಇರುವುದಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 3**

1. ಸಂಚಾರಿ ಶಿಶು ಕೇಂದ್ರಗಳ ತರಬೇತಿ ಕಾರ್ಯಕ್ರಮದಲ್ಲಿ ಯಾರಾದರೂ ಭಾಗವಹಿಸಬಹುದೇ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿ.

____________________________________________

____________________________________________

____________________________________________

____________________________________________

2. ಸಂಚಾರಿ ಕೇಂದ್ರಗಳು ತನ್ನ ಶಿಶುಪಾಲನಾ ಕಾರ್ಯ ಕರ್ತರಿಗೆ ನೀಡುವ ತರಬೇತಿಯ ಎರಡು ಪ್ರಮುಖ ಲಕ್ಷಣಗಳನ್ನು ತಿಳಿಸಿ.

____________________________________________

____________________________________________

____________________________________________

3. ಸಂಚಾರಿ ಕೇಂದ್ರಗಳು ಕ್ಷೇತ್ರಮಟ್ಟದಲ್ಲಿ ಎದುರಿಸುವ ಯಾವುದಾದರೂ ಎರಡು ಅಡಚಣೆಗಳನ್ನು ಹೆಸರಿಸಿ ಮತ್ತು ಸಂಸ್ಥೆಯು ಅವುಗಳನ್ನು ನಿವಾರಿಸಲು ಮಾಡುವ ಪ್ರಯತ್ನಗಳನ್ನು ತಿಳಿಸಿ.

____________________________________________

____________________________________________

____________________________________________

## 20.10 ಉಪಸಂಹಾರ

ಸಂಚಾರಿ ಶಿಶು ಕೇಂದ್ರಗಳು ಸ್ವಯಂಸೇವಾ ಸಂಸ್ಥೆಯಾಗಿದ್ದು, ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಕಾರ್ಮಿಕರ ಮಕ್ಕಳಿಗಾಗಿ 1969 ರಲ್ಲಿ ಮೀರಾ ಮಹಾದೇವನ್ ಅವರಿಂದ ಪ್ರಾರಂಭಿಸಲ್ಪಟ್ಟಿತು. ಈ ಮಕ್ಕಳ ಪೋಷಕರು ಕಟ್ಟಡ ಕಾಮಗಾರಿಯಲ್ಲಿ ತೊಡಗಿದ್ದಾಗ, ಆ ಸ್ಥಳದಲ್ಲಿ, ಅಪಾಯಕಾರಿಯ ಪರಿಸರದಲ್ಲಿ ಮಕ್ಕಳು ಅವರನ್ನು ನೋಡಿಕೊಳ್ಳುವವರು ಯಾರೂ ಇಲ್ಲದೆ ಇರುತ್ತಿದ್ದರು. ತರುವಾಯ, ಈ ಸಂಸ್ಥೆಯು ತನ್ನ ಚಟುವಟಿಕೆಗಳನ್ನು ಕೊಳೆಗೇರಿಗಳಿಗೆ ಮತ್ತು ಪುನರ್ವಸತಿ ಕಾಲೋನಿಗಳಿಗೂ ವಿಸ್ತರಿಸಿತು.

ಸಂಚಾರಿ ಶಿಶು ಕೇಂದ್ರಗಳು ಗಣನೀಯವಾಗಿ ಪರಿಣಾಮಕಾರಿಯಾದಂತ ಕಾರ್ಯಕ್ರಮವೊಂದನ್ನು ನಡೆಸುತ್ತಿರುವ ಒಂದು ಸಂಸ್ಥೆಯಾಗಿದೆ. ಇದರ ದಿನ-ಆರೈಕೆ ಕೇಂದ್ರಗಳು ದೆಹಲಿ, ಬಾಂಬೆ, ಪೂನಾದ ದೊಡ್ಡ ಕಟ್ಟಡ ಕಾಮಗಾರಿ ಸ್ಥಳ, ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿವೆ. ಯಾವುದೇ ಒಂದು ಕೆಲಸದ ಸ್ಥಳದಲ್ಲಿರುವ ಈ ಕೇಂದ್ರವು ತಾತ್ಕಾಲಿಕವಾಗಿದ್ದು ಕಟ್ಟಡ ನಿರ್ಮಾಣ ಪೂರ್ಣಗೊಂಡ ಕೂಡಲೇ ಮುಚ್ಚಲಾಗಿದ್ದು ಬೇರೊಂದು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಹೊಸ ಕೇಂದ್ರವೊಂದನ್ನು ಸ್ಥಾಪಿಸಲಾಗುತ್ತದೆ. ಕೊಳೆಗೇರಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿರುವ ಕೇಂದ್ರಗಳು ಹೆಚ್ಚು ಶಾಶ್ವತವಾಗಿರುತ್ತವೆ. ಈ ಕೇಂದ್ರಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ, ಪೂರಕ ಪೌಷ್ಟಿಕಾಂಶ, ಅನೌಪಚಾರಿಕ ಶಿಕ್ಷಣ ಮತ್ತು ಸಮುದಾಯಕ್ಕೆ ಬೆಂಬಲ ನೀಡುವಂತ ಸೇವೆಗಳನ್ನು ಒದಗಿಸಲಾಗುತ್ತಿದೆ.

ಈ ಸಂಸ್ಥೆಯು ಅನೇಕ ರೀತಿಯಲ್ಲಿ ವಿಶಿಷ್ಟವಾಗಿದೆ. ಕಾರ್ಯಕ್ರಮ ನಿರ್ವಹಣೆ ಮತ್ತು ಕಾರ್ಯ ಕರ್ತರಿಗೆ ನೀಡುವ ತರಬೇತಿಗೆ ಸಂಬಂಧಿಸಿದಂತೆ ಅನೇಕ ಗಮನಾರ್ಹ ಲಕ್ಷಣಗಳು ಈ ಕಾರ್ಯಕ್ರಮವನ್ನು ಒಂದು ಅನುಕರಣೀಯ ಮಾದರಿಯನ್ನಾಗಿಸಿದೆ. ಸಂಸ್ಥೆಯು ಪರಿಣಾಮಕಾರಿಯಾಗಿ ಸೇವೆಗಳನ್ನು ತಲುಪಿಸಲು ಅನುಕೂಲಕರವಾದ ಒಂದು ರೀತಿಯದ ಕಾರ್ಯನಿರ್ವಹಣಾ ವಾತಾವರಣವನ್ನು ಸೃಷ್ಟಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದೆ.

ಈ ಕಾರ್ಯಕ್ರಮವು ಅನೇಕ ಮೂಲಗಳಿಂದ ದತ್ತಿನಿಧಿಯನ್ನು ಪಡೆಯುತ್ತದೆ. ಬಹು ಮುಖ್ಯವಾಗಿ, ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರ ಸಂಸ್ಥೆ ಮತ್ತು ಸಂಚಾರಿ ಶಿಶು ಕೇಂದ್ರಗಳ ನಡುವೆ ನಿರಂತರವಾಗಿ ಪರಿಣಿತಿಯ ವಿನಿಮಯ ನಡೆಯುತ್ತದೆ.

## 20.11 ನಿಮ್ಮ ಪ್ರಗತಿ ಪರೀಕ್ಷೆಗಳಿಗೆ ಉತ್ತರಗಳು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 1

1. (i) c (ii) c (iii) d

2. ಸಂಚಾರಿ ಶಿಶು ಕೇಂದ್ರಗಳು ದಿನ-ಆರೈಕೆ ಕೇಂದ್ರಗಳನ್ನು ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗಾಗಿ ಸ್ಥಾಪಿಸುತ್ತದೆ. ಈ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಒಂದು ಸಂಚಾರಿ ಶಿಶು ಕೇಂದ್ರದ ಇರುವಿಕೆಯು ಕಟ್ಟಡ ನಿರ್ಮಾಣ ಕೆಲಸದ ಅವಧಿಗೆ ಸೀಮಿತವಾಗಿರುತ್ತದೆ. ಕೆಲಸ ಮುಗಿದ ನಂತರ ಕಾರ್ಮಿಕರು ಮತ್ತೊಂದೆಡೆ ಹೋದಂತೆ ಕೇಂದ್ರವು ಮುಚ್ಚಲ್ಪಡುತ್ತದೆ ಮತ್ತು ಇನ್ನೊಂದು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಸ್ಥಾಪಿಸಲಾಗುತ್ತದೆ. ಕೆಲವೊಮ್ಮೆ, ಕಟ್ಟಡ ಕಾಮಗಾರಿ ಸ್ಥಳದಲ್ಲಿಯೇ ದತ್ತ ಪರಿಸ್ಥಿತಿಯ ಅಡೆತಡೆಗಳಿಂದಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬದಲಾಯಿಸಬೇಕಾಗುತ್ತದೆ. ಹೀಗೆ ಅಸ್ಥಿರತೆ ಅಂತರ್ನಿಹಿತವಾಗಿದೆ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 2

i. ತಪ್ಪು. ಸಂಚಾರಿ ಶಿಶು ಕೇಂದ್ರಗಳು ದಿನ-ಆರೈಕೆ ಕೇಂದ್ರಗಳನ್ನು ದೆಹಲಿ, ಬಾಂಬೆ ಮತ್ತು ಪೂನಾದಲ್ಲಿ ನಡೆಸುತ್ತಿದೆ.

ii. ತಪ್ಪು. ಸಂಚಾರಿ ಶಿಶು ಕೇಂದ್ರಗಳು ನಡೆಸುವ ಕೇಂದ್ರಗಳಿಗೆ ಬರುವ ಬಹುತೇಕ ಮಕ್ಕಳು ಕಟ್ಟಡ ಕಾಮಗಾರಿ ನಡೆಯುವ ಸ್ಥಳದಲ್ಲಿಯೇ ವಾಸವಾಗಿರುತ್ತಾರೆ.

iii. ತಪ್ಪು. ಒಂದು ನಿರ್ದಿಷ್ಟ ಸಂಚಾರಿ ಶಿಶು ಕೇಂದ್ರಕ್ಕೆ ಮಗುವೊಂದರ ನಿರಂತರ ಹಾಜರಾತಿಯ ಅವಧಿಯು ಹೆಚ್ಚಿನ ಸಂದರ್ಭಗಳಲ್ಲಿ ಮೂರು ತಿಂಗಳಿಗೂ ಕಡಮೆ ಎಂಬುದು ತಿಳಿದುಬಂದಿದೆ.

iv. ತಪ್ಪು. ಸಂಚಾರಿ ಶಿಶು ಕೇಂದ್ರಗಳ ಕ್ಷೇತ್ರ ಕಾರ್ಯಕ್ರಮದ ಮೂರು ಮುಖ್ಯ ಅಂಶಗಳೆಂದರೆ, ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ: ಶಿಕ್ಷಣ ಮತ್ತು ಸಂಜ್ಞಾನಾತ್ಮಕ ಬೆಳವಣಿಗೆ ಮತ್ತು ಸಮುದಾಯಕ್ಕೆ ಬೆಂಬಲ ನೀಡುವಿಕೆ.

v. ತಪ್ಪು. ಸಂಚಾರಿ ಶಿಶು ಕೇಂದ್ರಗಳು 0-12 ವಯಸ್ಸಿನ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ಆರೋಗ್ಯ ಸೇವೆಗಳನ್ನು ಒದಗಿಸುತ್ತವೆ. ಕೆಲವು ಸೇವೆಗಳು - ಪ್ರಥಮ ಚಿಕಿತ್ಸೆಯಂಥವು - ಕಾಮಗಾರಿ ಸ್ಥಳದಲ್ಲಿನ ಎಲ್ಲರಿಗೂ ನೀಡಲಾಗುತ್ತದೆ.

2.ನೋಡಿ, ಉಪವಿಭಾಗ 20.5.3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಅಭ್ಯಾಸ 3**

1. ಇಲ್ಲ. ಅಭ್ಯರ್ಥಿಯು ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆಯಾದ ಹತ್ತನೇ ತರಗತಿಯ ಪ್ರಮಾಣ ಪತ್ರ ಹೊಂದಿರಬೇಕು. ಅದರೊಂದಿಗೆ, ಅಭ್ಯರ್ಥಿಗಳ ಜ್ಞಾನ ಮತ್ತು ಕೌಶಲವನ್ನು ಮೌಲ್ಯಮಾಪನ ಮಾಡಲು ಸಂಚಾರಿ ಶಿಶು ಕೇಂದ್ರಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಅವನು/ಅವಳು ಉತ್ತೀರ್ಣರಾಗಬೇಕು.
2. i. ತರಬೇತಿಯು "ಇಂಟರ್ನಶಿಪ್ ಮಾದರಿಯದ್ದು". ಶಿಕ್ಷಾರ್ಥಿಗಳು ತರಬೇತಿ ಭತ್ಯೆಪಡೆಯುತ್ತಾರೆ ಮತ್ತು ಅವರು ನೇಮಕಗೊಂಡ ಕೇಂದ್ರದಲ್ಲಿನ ಅನುಭವಿ ಕಾರ್ಯ ಕರ್ತರಿಂದ ಕಲಿಯುತ್ತಾರೆ.

   ii. ತರಬೇತಿಯು ಕೆಲಸದ ಮೇಲಿನ ಅನುಭವದ್ದಾಗಿರುತ್ತದೆ. ಹಾಗಾಗಿ ಶೇಕಡ 80% ಸಮಯವನ್ನು ಶಿಕ್ಷಾರ್ಥಿಗಳು ಕೇಂದ್ರದಲ್ಲಿ ಮಕ್ಕಳೊಡನೆ ಕಳೆಯುತ್ತಾರೆ ಮತ್ತು ಇನ್ನುಳಿದ ಶೇಕಡ 20% ಸಮಯವನ್ನು ಕಾರ್ಯಾಗಾರಗಳಲ್ಲಿ ಸೈದ್ಧಾಂತಿಕ ಜ್ಞಾನಾರ್ಜನೆಗೆ ವ್ಯಯಿಸುತ್ತಾರೆ.
3. ನೋಡಿ, ವಿಭಾಗ 20.7

**ಅನುಬಂಧ 1**

## ಸಂಚಾರಿ ಶಿಶು ಕೇಂದ್ರಗಳ ಖರ್ಚುವೆಚ್ಚದ ಅನುಪಾತ - ಬಾಂಬೆ ವಿಭಾಗ (ವರ್ಷ 1987-88)

### ಆದಾಯ

**ಸರ್ಕಾರ** (ಕೇಂದ್ರ ಸಾಮಾಜಿಕ ಕಲ್ಯಾಣ ಮಂಡಳಿ) 35.6%

| | | |
|---|---|---|
| ಅಂತರಾಷ್ಟ್ರೀಯ ಸಂಸ್ಥೆಗಳು | • ಇಂಡೋ ಜರ್ಮನ್ ಸೋಷಿಯಲ್ ಸರ್ವಿಸ್ ಸೊಸೈಟಿ<br>• ಆಕ್ಸಫ್ಯಾಮ್<br>• ಏಯ್ಡ್ ಎಟ್ ಆಕ್ಷನ್ - ಫ್ರಾನ್ಸ್ | 17.6%<br>9.8%<br>5.3% |
| ಭಾರತೀಯ ಸಂಸ್ಥೆ ಚೈಲ್ಡ್ ರಿಲೀಫ್ ಅಂಡ್ ಯು | | 3.3% |
| ಸಾರ್ವಜನಿಕರ ಕೊಡುಗೆ | | 21.7% |
| ಮಕ್ಕಳ ಪ್ರಾಯೋಜನೆ | | 0.3% |
| ದತ್ತಿನಿಧಿ ಸಂಗ್ರಹ ಕಾರ್ಯಕ್ರಮ | | 1.0% |
| ಇತರೆ | | 5.4% |
| | | 100.0% |

### ಖರ್ಚು

| | | |
|---|---|---|
| ಮೂಲಸೌಕರ್ಯಗಳು | • ಕ್ಷೇತ್ರ ಸಿಬ್ಬಂದಿ<br>• ಆಡಳಿತ<br>• ದತ್ತಿನಿಧಿ ಸಂಗ್ರಹ<br>• ಗೌರವಧನ<br>• ಸಿಬ್ಬಂದಿ ಕಲ್ಯಾಣ<br>• ಆಡಳಿತ (ಕಾರ್ಯಾಚರಣೆ) | 50.7%<br>4.3%<br>0.8%<br>0.8%<br>10.3%<br>6.6% |
| ಕಾರ್ಯಕ್ರಮ | • ಸಾಮಾನ್ಯ ಯೋಗಕ್ಷೇಮ<br>• ಆರೋಗ್ಯ ಯೋಗಕ್ಷೇಮ<br>• ಪೌಷ್ಟಿಕಾಂಶ<br>• ಶಿಕ್ಷಣ<br>• ಸಂಶೋಧನೆ | 2.4%<br>5.4%<br>12.0%<br>3.8%<br>2.1% |
| ಸಲಕರಣೆಗಳು | | 0.8% |

| | | |
|---|---|---|
| | | 100.0% |

**ಮೂಲ: ವಾರ್ಷಿಕ ವರದಿ, 1987-88, ಸಂಚಾರಿ ಶಿಶು ಕೇಂದ್ರಗಳು-ಬಾಂಬೆ ವಿಭಾಗ**

**ಅನುವಾದಕರು: ನಾಗಮಣಿ ಎಸ್. ಎನ್/ ಪರಿಶೀಲಕರು:**

**ಮೂಲ:**